ತಾವೆಲ್ಲರೂ ಒಂದು ನಿಮಿಷ ಎದ್ದು ನಿಂತು ಮೌನವನ್ನಾಚರಿಸುವ ಮೂಲಕ ದಿವಂಗತರಿಗೆ ಗೌರವವನ್ನು ಸೂಚಿಸಬೇಕೆಂದು ಕೋರುತ್ತೇನೆ.

*The House stood in silence for a Minute*

MR. SPEAKER.—Now Questions will be taken up

## Seeking Consent of the Speaker for permission to make a Statement before Question Hour.

SRI B. BHASKAR NAIDU.—There are no Medicines.....

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೆ, ನಾನು ಒಂದು ಅಡ್ಜರ್ನ್‌ಮೆಂಟ್ ಮೋಷನ್ ಕಳಿಹಿಸಿ ಕೊಟ್ಟಿದ್ದೆ.

ಅಧ್ಯಕ್ಷರು,—ಬಿಸಿನೆಸ್ ಆಡ್ವೈಸರಿ ಕಮಿಟಿ ಕುಳಿತು ನಿಯಮಾವಳಿ ಪ್ರಕಾರ ಏನು ನಿರ್ಧಾರ ಮಾಡಿದೆ ಆದರ ಪ್ರಕಾರ ಸಭೆ ನಡೆದುಕೊಳ್ಳಬೇಕು. ಆದ್ದರಿಂದ ಮಾನ್ಯ ಸದಸ್ಯರಾದ ಭೀಮಣ್ಣ ಖಂಡ್ರೆಯವರು ದಯವಾಡಿ ಕುಳಿತುಕೊಳ್ಳಬೇಕು,

ಶ್ರೀ ಎಸ್ ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಈಗ ಒಂದು ಅಸಾಮಾನ್ಯ ಪರಿಸ್ಥಿತಿಯಲ್ಲಿ ತಮ್ಮ ಅಪ್ಪಣೆ ಪಡೆಯುತ್ತಿದ್ದೇನೆ.

MR. SPEAKER.—Let us take up Questions according to programme.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಪ್ರಜಾಪ್ರಭುತ್ವದಲ್ಲಿ.....

MR. SPEAKER.—According to rule 32.

> "Unless the Speaker otherwise directs, the first hour of every day of Meeting shall be available for the asking and answering of questions." ಎಂದು ಇದೆ.

SRI S.R. BOMMAI.—I agree. ಸರ್ಕಾರ ಪ್ರಜಾಪ್ರಭುತ್ವಕ್ಕನುಗುಣವಾಗಿ, ಕಾನೂನು ಬದ್ಧವಾಗಿ ಆಡಳಿತ ನಡೆಸುವಾಗ, ಶಾಸನ ಸಭೆಯು ಕೂಡ ನಿಯಮಕ್ಕನುಗುಣವಾಗಿ ನಡೆಯುತಕ್ಕುದ್ದು ಸರಿ. ಈಗ ಅಸಾಮಾನ್ಯ ಪರಿಸ್ಥಿತಿಯಲ್ಲಿ ಅಪ್ಪಣೆ ಪಡೆಯುತ್ತಿದ್ದೇನೆ.

(Interruptions)

MR. SPEAKER.—This is Question Hour' we have to proceed according to rules.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ತಮ್ಮ ಅಪ್ಪಣೆ ಕೇಳುತ್ತಿದ್ದೇನೆ.

MR. SPEAKER.—I have not permitted you. Please resume your seat.

(Interruptions)

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಹೇಳಿಕೆ ಕೊಡುವಂತಹ ಸಂದರ್ಭ ಉಂಟಾಗಿದೆ. ನಾವು ಈ ಕಡೆಯಿಂದ ಎಲ್ಲ ರೀತಿಯ ಸಹಕಾರ ಕೊಟ್ಟಿದ್ದೇವೆ. ನಿಯಮಕ್ಕೆ ಅನುಗುಣವಾಗಿ ನಡೆದುಕೊಂಡಿದ್ದೇವೆ.

ಅಧ್ಯಕ್ಷರು.—ಮೊದಲು ಪ್ರಶ್ನೋತ್ತರ ವೇಳೆ ಮುಗಿಯಲಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಪ್ರಶ್ನೋತ್ತರ ಕಾಲವನ್ನು ಮುಂದೂಡಿ ನಮಗೆ ಹೇಳಿಕೆ ಕೊಡಲಿಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದ ಸ್ಪೀಫನ್ ಅವರು.....

(ಗೊಂದಲ)

SRI A. LAKSHMISAGAR.—You must give a patient hearing.

MR. SPEAKER.—Why other item? According to agenda we have to take up business.

ರೂಲ್ಸ್ ಪ್ರಕಾರ ಪ್ರಶ್ನೋತ್ತರಗಳು ಆಗಲಿ ಆ ಮೇಲೆ ನೋಡೋಣ. ಪ್ರಶ್ನೋತ್ತರವೇಳೆಯಲ್ಲಿ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಮ್ಮ ಅಪ್ಪಣೆ ಪಡೆದು ನಾನು ಮಾತನಾಡಬಹುದು. ತಾವು ಬೇಕಾದರೆ ಪ್ರಶ್ನೋತ್ತರ ವೇಳೆಯನ್ನು ಮುಂದೂಡಬಹುದು. ಈಗ ಪ್ರಶ್ನೋತ್ತರ ವೇಳೆಯನ್ನು ಮುಂದೂಡಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ಆಗುವುದಿಲ್ಲ.

ಶ್ರೀ ಎ. ಲಕ್ಷ್ಮಿಸಾಗರ್—ಮಾನ್ಯ ವಿರೋಧಪಕ್ಷದ ನಾಯಕರು ಏನು ಹೇಳುತ್ತಾರೆ ಎಂಬುದನ್ನು ದಯಮಾಡಿ ಕೇಳಿ. Please lend me your ears. Let me make my submission. You can decide afterwards in any manner you like.

MR. SPEAKER.—Let us take it up afterwards.

SRI A. LAKSHMISAGAR.—Sir...

MR. SPEAKER.—The hon. member cannot force me.

SRI A. LAKSHMISAGAR.—Sir, we are appealing to you.

MR. SPEAKER.—I have to act according to the Rules.

ಮಾನಂ ಹೇಳುತ್ತೇನೆ. ಈಗ ಪ್ರಶ್ನೋತ್ತರ ನಡೆಯಲಿ. ಬಿಸಿನೆಸ್ ಅಡ್ವೈಜರಿ ಕಮಿಟಿಯವರು ಏನು ತೀರ್ಮಾನ ಮಾಡಿದ್ದಾರೆ ಅದರ ಪ್ರಕಾರ ಹೋಗೆಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ದಯವಿಟ್ಟು ನಾನು ಹೇಳುವುದನ್ನು ಕೇಳಿ. ತಾವು ನ್ಯಾಯದ ತಕ್ಕಡಿಯನ್ನು ಎತ್ತಿಹಿಡಿಯಬೇಕಾಗಿದೆ. ಜವಾಬ್ದಾರಿ ತಮ್ಮಮೇಲೆ ಇದೆ. ನಿಯಮಕ್ಕೆ ಅನುಗುಣವಾಗಿ ನಾನು ಒಂದು ಹೇಳಿಕೆಯನ್ನು ಕೊಡಬೇಕಾಗಿದೆ.

ಶ್ರೀ ಮಳ್ಳೂರ್ ಆನಂದರಾವ್.—ದಯವಿಟ್ಟು ತಾವು ನಮ್ಮ ವಿರೋಧ ಪಕ್ಷದ ನಾಯಕರು ಒಂದು ಹೇಳಿಕೆಯನ್ನು ಕೊಡುವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ದಯವಿಟ್ಟು ವಿರೋಧಪಕ್ಷದ ನಾಯಕರು ಹೇಳುವುದನ್ನು ಕೇಳಿ. (ಗದ್ದಲ ಅನೇಕ ಜನ ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದರು. ಪ್ರಜಾಪ್ರಭುತ್ವಕ್ಕೆ ಧಿಕ್ಕಾರ ಎಂದು ಕೂಗುತ್ತಿದ್ದರು)

(At this stage Sri Mallur Ananda Rao and two other Members of the Opposition advanced towards the Podium)

SRI MALLUR ANANDA RAO.—Please allow the Leader of the Opposition to make his statement. We want protection to be given to the property of the people.

SRI S.R. BOMMAI.—Sir, following the expulsion of Smt. Indira Gandhi..... * * * *

MR. SPEAKER.—Now nothing should be recorded.

* * * * * * * *

MR. SPEAKER.—I order that nothing should be recorded.

1-30 P M.

(ಅಧ್ಯಕ್ಷರ ಪೀಠದ ಮುಂದೆ ಖಾಲಿ ಇರುವ ಜಾಗದಲ್ಲಿ ಮಾನ್ಯ ಶ್ರೀ ಮಳ್ಳೂರು ಆನಂದರಾವ್ ರವರು ಧರಣಿ ಕುಳಿತಿದ್ದುದರಿಂದ, ಕಾಂಗ್ರೆಸ್ ಸದಸ್ಯರುಗಳು ಸಹ ಸ್ಪೀಕರ್‌ರವರ ಪೀಠದ ಮುಂಭಾಗ ದಲ್ಲಿರುವ ಜಾಗದಲ್ಲಿ ಬಂದು ಸೇರಿದರು, ಆನಂತರ ಜನತಾ ಮತ್ತು ಕಾಂಗ್ರೆಸ್ ಪಕ್ಷಗಳ ಸದಸ್ಯರುಗಳು ಪರ ಮತ್ತು ವಿರುದ್ಧ ಘೋಷಣೆಗಳನ್ನು ಕೂಗುವುದಕ್ಕೆ ಪ್ರಾರಂಭಿಸಿದರು.)

MR. SPEAKER.—Now, the House will adjourn for half-an-hour.

*The House rose at Thirty seven minutes past One of the Clock and reassembled at Thirty minutes past Four of the Clock.*

[MR. SPEAKER in the Chair]

MR. SPEAKER.—Now the Questions will be taken up.

ಶ್ರೀ ಎಸ್. ಆರ್. ಬೊಮ್ಮಾಯ್.—ಅಧ್ಯಕ್ಷರೇ, ನಾನು ಮೊದಲೇ ಮನವಿ ಮಾಡಿಕೊಂಡಂತೆ ಪುನಃ ತಮ್ಮಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ, ಈ ದಿನದ ಪ್ರಶ್ನೋತ್ತರ ಕಾಲವನ್ನು ಮುಂದಕ್ಕೆ ಹಾಕಿ, ನಾನು ಒಂದು ಹೇಳಿಕೆ ಕೊಡುವುದಕ್ಕೆ ಅವಕಾಶ ಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ತಮ್ಮಗೆ ತಿಳಿಸುವುದೇನೆಂದರೆ, ಈ ಮನೆಯ ನಿಯಮಾವಳಿ ಪ್ರಕಾರ ತಾವು ಹೇಳಿಕೆ ಕೊಡತಕ್ಕ ಒಂದು ನಕಲನ್ನು ನನ್ನ ಕಡೆ ಕೊಡಿ. ನಾನು ಪರಿಶೀಲನೆ ಮಾಡಿ ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯ್.—ಮಂತ್ರಿಗಳು ಹೇಳಿಕೆ ಕೊಡಬೇಕೆಂದರೆ, ಈ ಮನೆಯ ನಿಯಮಾವಳಿ ಪ್ರಕಾರ ತಮ್ಮ ಅಪ್ಪಣೆ ಪಡೆದು ಕೊಡಬೇಕಾಗುತ್ತದೆ. ವಿರೋಧ ಪಕ್ಷದ ನಾಯಕರೂ ಆ ರೀತಿ ಕಾಪಿ ಕೊಟ್ಟು ಹೇಳಿಕೆ ಕೊಡತಕ್ಕ ಅವಶ್ಯಕತೆ ಇಲ್ಲ. ಮೊನ್ನೆ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾದ ಸ್ಪೀಫನ್‌ರವರು ಕೂಡ ಅಧ್ಯಕ್ಷರ ಪರವಾನಗಿ ಪಡೆದು ಹೇಳಿಕೆ ಕೊಟ್ಟಿದ್ದಾರೆ. ತಾವು ಕೂಡ ಅದೇರೀತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ತಮಗೆ ಪ್ರಶ್ನೋತ್ತರ ಕಾಲವನ್ನು ಮುಂದಕ್ಕೆ ಹಾಕತಕ್ಕ ಅಧಿಕಾರ ನಿಯಮಾವಳಿ ಪ್ರಕಾರ ಇದೆ.

ಅಧ್ಯಕ್ಷರು.—ನನಗೆ ಅದರ ಒಂದು ನಕಲನ್ನು ಕಳುಹಿಸಿಕೊಡಿ. Now, let us take up Questions.

ಶ್ರೀ ಎಸ್. ಆರ್. ಬೊಮ್ಮಾಯ್.—ಪ್ರಶ್ನೋತ್ತರ ಕಾಲವನ್ನು ಮುಂದಕ್ಕೆ ಹಾಕತಕ್ಕಂಥ ಅಧಿಕಾರ ರೂಲ್ಸ್‌ನಲ್ಲಿ ಇದೆ.

ಶ್ರೀ ಭೀಮಣ್ಣ ಖಂಡ್ರೆ.—ರೂಲ್ ಆಫ್ ಲಾ ಇದ್ದಲ್ಲಿ ರೂಲ್ಸ್ ಇರುತ್ತದೆ. ರೂಲ್ ಲಾ ಕೇ ಇಲ್ಲ ಅಂದರೆ, ರೂಲ್ಸ್ ಎಲ್ಲಿ ಬರುತ್ತದೆ?

ಅಧ್ಯಕ್ಷರು.—ಕುಳಿತುಕೊಳ್ಳಿ, ರೂಲ್ಸ್ ಇದೆ. ರೂಲ್ಸ್ ಇಲ್ಲದೆ ಎಲ್ಲೂ ಹೋಗಿಲ್ಲ. You have to catch the eye of the Speaker and then only you have to speak

---

**** Matter not recorded as ordered by the chair.

You cannot rise and speak like this. You have to obey the orders of the Chair. It is very unfair on your part to speak like this.

SRI GOVIND P. VADEYARAJ.—He was under the impression that he has caught your eye.

MR. SPEAKER.—I have not permitted him to speak.

SRI S.R. BOMMAI.—Sir, Rule No. 32 says as follows :—

"Unless the Speaker otherwise directs, the first hour of every day of meeting shall be available for the asking and answering of questions."

Here, the words used are "otherwise directs." ತಾವು ಪ್ರಶ್ನೋತ್ತರ ಕಾಲ ಬೇಡ ಎಂದು ಆಜ್ಞೆ ಮಾಡಿ ನನಗೆ ಹೇಳಿಕೆ ಕೊಡಲಿಕ್ಕೆ ಅಪ್ಪಣೆ ಕೊಡಬಹುದು. ಇಂಥ ಒಂದು ಅಧಿಕಾರ ತಮಗೆ ಇದೆ. ಆ ಒಂದು ಅಧಿಕಾರವನ್ನು ಚಲಾಯಿಸಿ ನನಗೆ ಅಪ್ಪಣೆ ಕೊಡಬೇಕೆಂದು ಪುನವಿ ವಿಣಾಡಿಕೊಳ್ಳುತ್ತೇನೆ.

MR. SPEAKER.—Please refer to Rule No. 306 which says thus.

"A statement may be made by a Minister on a matter of public importance with the consent of the Speaker. but no question shall be asked at the time the statement is made."

Here, you have not given the matter. The matter is not before me. If you give the matter, I will get it examined. Unless I get it examined, I cannot permit at this stage.

SRI S.R. BOMMAI.—Sir, you have referred to Rule.306.

SRI M.C. BASAPPA.—If the statement which he intends to make is oral one, how can you get it examined? Statement need not be a written one only. It may be an oral statement also.

MR. SPEAKER.—Without the permission of the Chair, it cannot be allowed. I have to get it examined. If it is an allegation on somebody, then I have to get it examined. That is why I asked for a copy of it.

SRI S. R. BOMMAI.—Sir, Rule No. 306 says as follows:-

"A statement may be made by a Minister on a matter of public importance with the consent of the Speaker, but no question shall be asked at the time the statement is made."

There is no provision in the rules that a statement should be submitted to the perusal of the Speaker. So far as Minister is concerned, he can make a statement without even submitting it to the Speaker much earlier and much less a perusal can be made by the Speaker. It is not necessary.

MR. SPEAKER.—At the same time, you must know what Rule No. 32 says. It says:

"Unless the Speaker otherwise directs, the first hour of every day of meeting shall be available for the asking and answering of questions."

SRI S. R. BOMMI.—That is correct.

ಅಧ್ಯಕ್ಷರು: ಪ್ರಶ್ನೋತ್ತರ ಕಾಲವನ್ನು ಡಿವಿಯೇಟ್ ಮಾಡಿ ಅನುಮತಿ ಕೊಡುವುದಕ್ಕೆ ಸಾಧ್ಯವಿಲ್ಲ. ಪ್ರಶ್ನೋತ್ತರ ಕಾಲ ಇದ್ದಾಗ ಬೇರೆ ವಿಚಾರ ಎತ್ತುವುದಕ್ಕೆ ಯಾವ ಪ್ರಾವಿಷನ್ ಇದೆ ತೋರಿಸಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಪ್ರಶ್ನೋತ್ತರ ಕಾಲವನ್ನು ರೂಲ್ ೩೭ರ ಪ್ರಕಾರ ಮುಂದಕ್ಕೆ ಹಾಕತಕ್ಕಂಥ ಅಧಿಕಾರ ತಮಗೆ ಇದೆ ನಾನು ಹೇಳಿಕೆ ಕೊಡತಕ್ಕ ವಿಷಯ ಬಹಳ ಮಹತ್ವದ್ದಾಗಿದೆ. ತಾವು ವಿಚಾರ ತಿಳಿದುಕೊಂಡರೆ ಅದರ ಅವಶ್ಯಕತೆ ಗೊತ್ತಾಗುತ್ತದೆ.

MR. SPEAKER.—This is a Question Hour. Let us take up the questions.

† SRI A. LAKSHMI SAGAR (Chickpet).—The rule is read out here. I want the considered opinion and a well-thought out process before a porticular decision is arrived at. The normal rule is that the Question Hour shall be gone through. Agreed. But what the rule says is: "Unless the Speaker otherwise directs, the first hour of every day of meeting shall be available for the asking and answering of questions."

MR. SPEAKER.—Please read the rule. It says "shall be".

SRI A. LAKSHMI SAGAR.—That is true. Then, what is the meaning of the expression "Unless the Speaker otherwise directs." Some meaning should be given in the interpretation of the rule or statutes. Every portion of the language that is contained in the rule must give some meaning.

The normal and usual meaning of the expression the first hour of every day of meeting shall be set apart for questions and asking answers is agreed. And then unless the Speaker otherwise derects-it means you have enough power impliedly given under this Rule. Therefore, the only question to be decided is whether the Leader of the Opposition can be permitted to make a statement. On this point I would request the Hon. Speaker to give your considered opinion. At this state I would also submit that there have been several occasions in which the questions were held over; and some questions were not taken up for the day and postponed. This means the Speaker has got ample power to postpone the questions and answers listed for the day.

---

† Indicates that remarks or speeches have not been revised by the member concerned.

MR. SPEAKER.—What is that rule?

SRI A. LAKSHMI SAGAR.—Sir, I would like to read rules 32 &33 of the Rules of Procedure and Conduct of Business in the Legislative Assembly. It reads thus;

> 32. Unless the Speaker otherwise directs, the first hour of every day of meeting shall he available for the asking and answering of question.
>
> 33. Unless the Speaker otherwise directs, the questions in relation to a particular session may be asked from the date immediately following the date of notification proroguing the previous session:

If we read the first portion of rule 'Unless the Speaker otherwise directs', we can say that Speaker has got ample power to postpone the question hour.

ಶ್ರೀ ಜೆ. ಎಚ್. ಪಟೇಲ್.—ಅಧಿವೇಶನ ಪ್ರಾರಂಭವಾದ ಮೊದಲನೇ ಗಂಟೆ ಪ್ರಶ್ನೋತ್ತರಕ್ಕೋಸ್ಕರ ಎಂದು ಕಾನೂನಿನಲ್ಲಿದೆ. ಆದುದರಿಂದ ಅಧಿವೇಶನ ಪ್ರಾರಂಭವಾದ ಮೇಲೆ ಇದು ಎಷ್ಟನೇ ಗಂಟೆ ?

ಅಧ್ಯಕ್ಷರು : ಈಗ ನಾಲಕ್ಕೂ ಮುಕ್ಕಾಲು ಗಂಟೆ.

ಶ್ರೀ ಜೆ. ಎಚ್. ಪಟೇಲ್.—ಮೊದಲನೇ ಗಂಟೆ ಮುಗಿದು ಹೋಯಿತು. ಅಧಿವೇಶನ ಪ್ರಾರಂಭವಾದ ಮೊದಲನೇ ಗಂಟೆ ಪ್ರಶ್ನೋತ್ತರಕ್ಕೋಸ್ಕರ ಎಂದು ಕಾನೂನಿನಲ್ಲಿರುವುದು. ಇದು, ಈಗ ಮೊದಲನೇ ಗಂಟೆ ಆಗುವುದಿಲ್ಲ.

ಅಧ್ಯಕ್ಷರು.—ಆ ಗಂಟೆ ಈಗ ಆಗುವುದಿಲ್ಲ ನಿಜ, ಇದಕ್ಕೆ ಯಾರು ಕಾರಣರು ಎನ್ನುವುದು ತಮಗೆ ಗೊತ್ತಿದೆ.

ಶ್ರೀ ಜೆ. ಎಚ್. ಪಟೇಲ್.—ನಮ್ಮ ನಾಯಕರು ಹೇಳಿಕೆ ಕೊಡುವುದಕ್ಕೆ ಆ ಕಡೆಯ ಸದಸ್ಯರು ಗಲಾಟೆ ಮಾಡಿದರು. ಆದ್ದರಿಂದ ಮುಂದೆ ಹೋಯಿತು. ಈ ರೂಲನ್ನು ಮತ್ತೊಂದು ಸಾರಿ ಓದುತ್ತೇನೆ.

> "ಸಭಾಧ್ಯಕ್ಷರವರು ಬೇರೆ ರೀತಿಯಲ್ಲಿ ಅಪ್ಪಣೆ ಮಾಡಿದ ಹೊರತು, ಸದಸ್ಯರು ಪ್ರಶ್ನೆಗಳನ್ನು ಕೇಳುವುದಕ್ಕೂ ಮತ್ತು ಅವುಗಳಿಗೆ ಉತ್ತರಗಳನ್ನು ತಿಳಿಸುವುದಕ್ಕೂ ಪ್ರತಿಯೊಂದು ದಿವಸದ ಉಪವೇಶನದ ಪ್ರಾರಂಭದಲ್ಲಿಯೂ ಒಂದು ಘಂಟೆಯ ಅವಕಾಶವು ಇರಬೇಕು."

ಈಗ ೫ ಗಂಟೆಯಾಗಿರುವುದನ್ನು ಒಪ್ಪದೆ, ೫ ಗಂಟೆಯಾಗಿಲ್ಲ ಎಂದರೆ ಇದು ಏನು? ಇದನ್ನು ವಾದ ಮಾಡುವುದಕ್ಕೆ ಸಾಧ್ಯವೇ? ಗಡಿಯಾರವನ್ನಾದರೂ ನೋಡಬೇಕು, ಇಲ್ಲಾ ತಮ್ಮನ್ನಾದರೂ ಕೇಳಬೇಕು. ಇವರಿಗೆ ಕಾಲದ ಪರಿಮಿತಿ ಗೊತ್ತಿಲ್ಲ. ಆಕಸ್ಮಾತ್ ತಾವು ಅನುಮತಿ ಕೊಟ್ಟರೂ...

SRI B. BASAVALINGAPPA.—First hour is postponed...

ಶ್ರೀ ಜೆ. ಎಚ್. ಪಟೇಲ್.—ಪೋಸ್ಟ್‌ಪೋನ್ ಆಗಿದ್ದರೆ ಆ ಗಂಟೆ ಇಲ್ಲಿ ಬರುತ್ತದೆ ಎಂದು ತೋರಿಸಿಕೊಡಿ. ಗಂಟೆ ಹೋದದ್ದು ಹೋಗಿ ಬಿಟ್ಟಿದೆ. ಈಗ ತಾವು ಅನುಮತಿ ಕೊಟ್ಟರೆ ಅದು ಇಲ್ಲೀಗಲ್ ಆಗುತ್ತದೆ. ಆದುದರಿಂದ ತಾವು ಅದಕ್ಕೆ ಅನುಮತಿ ಕೊಡಬಾರದು. ಯಾರಾದರೂ ಪ್ರಶ್ನೆಗಳನ್ನು ಕೇಳಿದರೆ ಅದಕ್ಕೆ ತಾವು ಅವಕಾಶ ಕೊಡಬಾರದು.

MR. SPEAKER.— As the House was not in order, the House was adjourned for half an hour.

ಅರ್ಧ ಗಂಟೆಯವರೆಗೆ ಅಡ್ಜರ್ನ್ ಆಗಿ ನಂತರ ಮೂಟ್ ಮಾಡೋಣ ಎಂದು ಹೇಳಿ ಹೌಸ್ ಅಡ್ಜರ್ನ್ ಆದದ್ದು ತಮಗೆ ಗೊತ್ತಿದೆ. ಈ ಮನೆಯ ನಾಯಕರು, ವಿರೋಧ ಪಕ್ಷದ ನಾಯಕರು ಮತ್ತು ಇನ್ನೂ ಕೆಲವು ಜನ ಸದಸ್ಯರು ಕುಳಿತು ಇದಕ್ಕೆ ಯಾವುದಾದರೂ ಒಂದು ಸೂತ್ರವನ್ನು ಕಂಡುಹಿಡಿಯಬೇಕು ಎಂದು ಮಾತನಾಡುವುದಕ್ಕೆ ಇಷ್ಟು ಹೊತ್ತು ಆಯಿತು. ಉದ್ದೇಶ ಪೂರ್ವಕವಾಗಿ ನಾವೇನು ಸಭೆಯನ್ನು ಮುಂದುವರೆಸಿ ಕಾಲವನ್ನು ಕಳೆದಿಲ್ಲ. ಈ ವಿಷಯವನ್ನು ಸಭೆಗೆ ತಿಳಿಸುತ್ತಾ ಇದ್ದೇನೆ. ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನ ಮಾಡಿದ ಅಜೆಂಡಾ ಪ್ರಕಾರ ನಾವು ಹೋಗುತ್ತಾ ಇದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಸ್ಟೇಟ್‌ಮೆಂಟ್ ಮಾಡುವುದಕ್ಕೆ ನಮಗೆ ಅವಕಾಶ ಕೊಡಿ ಎಂದು ಕೇಳುತ್ತಾ ಇದ್ದಾರೆ. ಯಾವ ರೂಲ್ ಪ್ರಕಾರ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶ ಕೊಡಬೇಕು ಎನ್ನುವುದು ತಿಳಿಸಿ ಎಂದು ನಾನು ಹೇಳುತ್ತಾ ಇದ್ದೇನೆ, ಅವರು ಯಾವ ರೂಲನ್ನು ತೋರಿಸುತ್ತಾ ಇಲ್ಲ. ಆ ಸ್ಟೇಟ್ ಮೆಂಟ್ ಏನಿದೆಯೋ ಅದನ್ನು ನನಗೆ ಕೊಡಿ, ನಾನು ಅದನ್ನು ಪರಿಶೀಲನೆ ಮಾಡುತ್ತೇನೆ, ಈಗ ಪ್ರಶ್ನೆಗಳನ್ನು ಮುಂದುವರೆಸೋಣ.

ಶ್ರೀ ಜೆ. ಎಚ್. ಪಟೇಲ್.—ನಾನು ಸ್ಟೇಟ್‌ಮೆಂಟನ್ನು ರೆಫರ್ ಮಾಡುತ್ತಾ ಇಲ್ಲ. ರೂಲ್‌ನಲ್ಲಿ "ಪ್ರತಿಯೊಂದು ದಿವಸದ ಉಪವೇಶನದ ಪ್ರಾರಂಭದಲ್ಲಿ ಮೊದಲನೇ ಗಂಟೆ ಪ್ರಶ್ನೋತ್ತರಕ್ಕೋಸ್ಕರ" ಎಂದು ನಿರ್ದಿಷ್ಟವಾಗಿದೆ. ನನ್ನ ಅನುಭವದಲ್ಲಿ ಹೇಳುವುದಾದರೆ...ಲೋಕಸಭೆಯಲ್ಲಿ ಯಾವುದೇ ಕಾರಣ ಕ್ಕೋಸ್ಕರ ಆ ದಿವಸದ ಮೊದಲನೇ ಗಂಟೆ ಮುಗಿದುಹೋದ ತಕ್ಷಣ ಅಲ್ಲಿ ಸ್ಪೀಕರ್‌ರವರು ಪ್ರಶ್ನೆಗಳನ್ನು ನಿಲ್ಲಿಸಿಬಿಟ್ಟಿದ್ದಾರೆಯೇ ಹೊರತು ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಪ್ರಶ್ನೆಗಳನ್ನು ಯಾವುದೇ ಕಾರಣ ದಿಂದ ತೆಗೆದುಕೊಂಡಂತಾದ್ದು ನನಗೆ ಗೊತ್ತಿಲ್ಲ.

ಅಧ್ಯಕ್ಷರು,—ನಾನೇ ಸ್ಪೀಕರ್ ಆಗಿರುವಾಗ ಹೌಸ್ ಅಡ್ವರ್ನ್ ಮಾಡಿದ ಮೇಲೆ ಪ್ರಶ್ನೆಗಳನ್ನು ತೆಗೆದುಕೊಂಡಿದೆ. ಬೇಕಾದರೆ ನಾಳೆ ಬೆಳಿಗ್ಗೆ ಅದನ್ನು ತೋರಿಸಿ ಕೊಡುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಈಗ ೫ ಗಂಟೆಯಾಗಿರುವಾಗ ಈ ೫ ಗಂಟೆಯನ್ನು ಮೊದಲನೇ ಒಂದು ಗಂಟೆ ಎಂದರೆ ಹೇಗೆ?

ಅಧ್ಯಕ್ಷರು : ನಾವು ಅಜೆಂಡಾ ಪ್ರಕಾರ ಹೋಗಬೇಕಾಗುತ್ತದೆ.

ಶ್ರೀ ಜೆ. ಎಚ್. ಪಟೇಲ್.—ಪ್ರತಿಯೊಂದಕ್ಕೂ ಕಾಲ ಇದೆ. ಇದು ಕಾನೂನಿಗೆ ವಿರುದ್ಧ. ಇದು ಪ್ರಶ್ನೋತ್ತರ ವೇಳೆಯಲ್ಲ. ಈಗ ಪ್ರಶ್ನೋತ್ತರಗಳನ್ನು ತೆಗೆದು ಕೊಂಡರೆ ಅದು ರೂಲ್ಸ್‌ಗೆ ವಿರುದ್ಧ ವಾಗುತ್ತದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸಭೆಯನ್ನು ಕರೆದದ್ದು ಒಂದು ಗಂಟೆಗೆ. ಎರಡು ಗಂಟೆಗೆ ಪ್ರಶ್ನೋತ್ತರ ವೇಳೆ ಮುಗಿದು ಹೋಗುತ್ತದೆ. ಈಗ ೫ ಗಂಟೆ. ಈ ೫ ಗಂಟೆಯನ್ನು ೨ ಗಂಟೆ ಎಂದು ತಿಳಿದುಕೊಳ್ಳಬೇಕೇ ಎನ್ನುವುದನ್ನು ತಾವು ಹೇಳಬೇಕು.

SRI S. M. SHEERNALY CHANDRASEKHAR.—Mr. Speaker, Sir, I raise a point of order. ತಾವು ರೂಲ್ ೩೨ರ ಪ್ರಕಾರ ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡುವುದು-it is a prerogative right of the Speaker. The Chair has not suspended the question hour and repeatedly telling that the permission to make a statement cannot be granted before the question hour. Therefore, let the question hour be taken up and there is no fun in suspending the question hour.

†ಶ್ರೀ ಜಿ. ಮಾದೇಗೌಡ (ಕೆರುಗಾವಲು).—ಸಭೆಯೇ ಪ್ರಾರಂಭವಾಗಿಲ್ಲ, ಇನ್ನು ಪಾಯಿಂಟ್ ಆಫ್ ಆರ್ಡರ್ ಎಲ್ಲಿಂದ ಬರುತ್ತದೆ.

SRI S. M. SHEERNALY CHANDRASEKHAR.—Sir, rule 32 is very clear. It reads thus :

> "32. Unless the Speaker otherwise directs, the first hour of every of meeting shall be available for the asking and answering of questions."

The Chair has not suspended the question hour and according to our hon. Member Sri J. H. Patel ಪ್ರಶ್ನೋತ್ತರ ವೇಳೆ ೨ ರಿಂದ ೩ ಗಂಟೆಯವರೆಗೆ ಇರಬೇಕಾಗಿತ್ತು. ಸಭೆ ಪ್ರಾರಂಭವಾದ ಮೇಲೆ ೧ ರಿಂದ ೨ ಗಂಟೆವರೆಗೆ ಪ್ರಶ್ನೋತ್ತರವೇಳೆ ಇದೆ. ಅದು ಮುಗಿದುಹೋದ ಮೇಲೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಈ ಸದನದಲ್ಲಿ ಪ್ರಶ್ನೋತ್ತರ ವೇಳೆಯನ್ನು ೩ ಗಂಟೆ ಮೇಲೆ ೪ ಘಂಟೆ ಮೇಲೆ ತೆಗೆದುಕೊಂಡಿರತಕ್ಕ ನಿದರ್ಶನಗಳಿವೆ. ಆದುದರಿಂದ ಇದರ ಬಗ್ಗೆ ತಾವು ರೂಲಿಂಗ್ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

† ಶ್ರೀ ಜಿ. ಮಾದೇಗೌಡ.—ಬಹುಶಃ ಈ ಒಂದು ವಿಶೇಷ ಸಂದರ್ಭದಲ್ಲಿ ಅಸೆಂಬ್ಲಿಯಲ್ಲಿ ಚರ್ಚೆ ನಡೆಯುತಕ್ಕಂಥ ಕಾಲದಲ್ಲಿ ಗೊಂದಲವೆದ್ದಿರತಕ್ಕಂಥ ಸಂದರ್ಭದಲ್ಲಿ, ಮಾನ್ಯ ಮುಖ್ಯ ಮಂತ್ರಿಯವರು, ಕರ್ನಾಟಕ ರಾಜ್ಯದಲ್ಲಿ ರಾಜಕೀಯ ಮಂತ್ರಿಗಳೇ ಆಗಿಲ್ಲ. ಇಡೀ ಇಂಡಿಯಾ ದೇಶದಲ್ಲಿಯೇ ಅತ್ಯಂತ ಘನತೆಯನ್ನು ಹೊಂದಿರತಕ್ಕಂಥ ಮಂತ್ರಿಗಳಾಗಿದ್ದಾರೆಂದು ಕಾಣುತ್ತದೆ. ಇದು ಒಂದು ವಿಶೇಷ ಸಂದರ್ಭವೆಂದು ಹೇಳುತ್ತೇನೆ. ಈ ಘಟನೆಯು ಆದಮೇಲೆ ರಾಜ್ಯಪಾಲರವರೇ ಹೇಳಿದ್ದಾರೆ. ಈ ದೇಶದಲ್ಲಿ ಒಂದು ಘಟನೆ ನಡೆದಿವೆ, ಕಾನೂನನ್ನು ಮುರಿದಿದ್ದಾರೆ, ಶಾಂತಿ ಭಂಗವಾಗಿದೆ ಎನ್ನುವ ಮಾತನ್ನು ರಾಜ್ಯಪಾಲರವರೇ ಹೇಳಿರುವುದರಿಂದ ತಾವು ಈ ಮಾತನ್ನು ಒಪ್ಪಿಕೊಳ್ಳುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಡಿ. ದೇವರಾಜ ಅರಸ್.—ಅಂದರೆ ಶ್ರೀ ಮಾದೇಗೌಡರು ಮಾತನಾಡಿದ ಮೇಲೆ ಈ ಸಭೆಯು ಪ್ರಾರಂಭವಾಯಿತೆಂದು ಇಟ್ಟುಕೊಳ್ಳೋಣವೆಂದು ಹೇಳುತ್ತೀರಾ?.

ಶ್ರೀ ಜಿ. ಮಾದೇಗೌಡ.—ಕಾನೂನು ಭಂಗವಾಗಿದೆ ಎನ್ನುವ ಮಾತನ್ನು ಸರ್ಕಾರವೇ ಒಪ್ಪಿಕೊಂಡ ಮೇಲೆ ಆ ಬಗ್ಗೆ ವಿಚಾರಣೆ ಮಾಡುತ್ತೇವೆಂದು ಹೇಳುವುದಕ್ಕೆ ಮಂಚಿಯೇ ಘಟನೆಯು ನಡೆದ ಕೂಡಲೆ ವಿಚಾರಣೆಯನ್ನು ಮಾಡಬೇಕಾಗಿತ್ತು. ಏತಕ್ಕೆಂದರೆ ಯಾವ ರೂಲ್ಸ್ ತೆಗೆದುಕೊಂಡರೂ ನಿಮಗೆ ಅಧಿಕಾರವಿದೆ. ಕಾನೂನನ್ನು ರಕ್ಷಣೆ ಮಾಡಲು ಸಂಪೂರ್ಣವಾದ ಹಕ್ಕು ನಿಮ್ಮ ಕೈಯಲ್ಲಿದೆ. ಈ ಎಲ್ಲ ಸೌಲಭ್ಯಗಳು ನಿಮಗೆ ಇರುವುದರಿಂದ ಈ ಒಂದು ವಿಶೇಷ ಸಂದರ್ಭವನ್ನು ಉಪಯೋಗಿಸಿಕೊಂಡು ತಮ್ಮ ಘನತೆಯನ್ನು ಉಳಿಸಿಕೊಳ್ಳುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ತಾವು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಳ್ಳುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ತಮಗೆ ಎಷ್ಟು ಕಳಕಳಿ ಇದೆಯೋ, ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ಮತ್ತು ಕಳಕಳಿಯು ವಿರೋಧಪಕ್ಷದವರಿಗೂ ಇದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ದೇಶದಲ್ಲಿ ಶಾಂತಿಯಿಂದ ರಾಜ್ಯಭಾರ ನಡೆಯಬೇಕು, ಜನರ ಆಸ್ತಿ ಪಾಸ್ತಿ, ಮಾನ ರಕ್ಷಣೆಯಾಗಬೇಕು ಎನ್ನುವ ಕಳಕಳಿಯು ಎಲ್ಲರಿಗೂ ಇರಬೇಕಾಗಿದೆ. ಆದ್ದರಿಂದ ವಿರೋಧ ಪಕ್ಷದ ನಾಯಕರು ಏನು ಒಂದು ಮಂಡನೆಯನ್ನು ಮಂಡಿಸಿದ್ದಾರೆ ಆ ವಿಷಯದಲ್ಲಿ ತಾವು ಒಪ್ಪಿಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ಇದರ ಬಗ್ಗೆ ಹೆಚ್ಚಿಗೆ ವಾದವಿವಾದಗಳನ್ನು ಮಾಡುವುದು ಬೇಡವೆಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

†ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ).—ಅಧ್ಯಕ್ಷರೆ ತಾವು ರೂಲಿಂಗ್ ಕೊಡುವುದಕ್ಕೆ ಪರಿಂಚಿತವಾಗಿ ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ಏತಕ್ಕೆಂದರೆ ತಾವು ರೂಲಿಂಗ್ ಕೊಟ್ಟ ಮೇಲೆ ಮಾತನಾಡುವುದು ಸರಿಯಲ್ಲ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದು ಇಷ್ಟೇ. ಸಭೆಯು ಸುಸೂತ್ರವಾಗಿ ನಡೆಯಬೇಕು ಎನ್ನುವುದು ನಮ್ಮ ಭಾವನೆಯಾಗಿರುತ್ತದೆ. ಹೊರಗಡೆ ನಡೆದಂಥ ಘಟನೆಗಳು, ಅತಿರೇಕ ಇವುಗಳ ಬಗ್ಗೆಯೂ ಮತ್ತು ಹೊರಗಡೆ ಇರತಕ್ಕಂಥವರ ಭಾವನೆ, ಒಳಗಡೆ ಇರತಕ್ಕಂಥ ಸದಸ್ಯರ ಭಾವನೆಯನ್ನು ಅರ್ಥಮಾಡಿಕೊಂಡು ನಮ್ಮ ವಿರೋದಪಕ್ಷದ ನಾಯಕರು ಒಂದು ಹೇಳಿಕೆಯನ್ನು ಕೊಡುವುದಕ್ಕೆ ತಾವು ಕೃಪೆಮಾಡಿ ಅವಕಾಶವನ್ನು ಮಾಡಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅನಾವಶ್ಯಕವಾಗಿ ಕೂಗಾಟ ಮಾಡುವುದರಿಂದ ಏನು ಪ್ರಯೋಜನವಾಗುವುದಿಲ್ಲ ಅತ್ತಕಡೆ ಕುಳಿತಿರತಕ್ಕಂಥ ಸದಸ್ಯರೂ ಕೂಡ ಕೇಳಲಿ.

ಶ್ರೀ ಡಿ. ದೇವರಾಜ ಅರಸ್.—ಈಗ ಕೂಗಾಟ ಮಾಡುತ್ತಿರುವವರು ಯಾರು ? ನೀವೇ ಕೂಗಾಟ ಮಾಡುತ್ತಿರುವವರು.

ಶ್ರೀ ಮಳ್ಳೂರ್ ಆನಂದರಾವ್.—ಪ್ರಶ್ನೋತ್ತರ ವೇಳೆಯನ್ನು ಪಕ್ಕಕ್ಕೆ ಇಡುವುದು ಎಲ್ಲ ಅಧಿಕಾರವು ತಮಗೆ ಇದೆ. ಕಳಕಳಿಯಿಂದ ತಮ್ಮನ್ನು ಕೇಳಿಕೊಳ್ಳುತ್ತೇನೆ, ಕೃಪೆಮಾಡಿ ನಮ್ಮ ನಾಯಕರಿಗೆ ಹೇಳಿಕೆ ಮಾಡಲಿಕ್ಕೆ ಅವಕಾಶ ಮಾಡಿಕೊಡಿ. ತಾವು ಪ್ರತಿಷ್ಠೆಯಮೇಲೆ ನಿಂತುಕೊಳ್ಳುವುದು ಬೇಡ. ನಾಳೆಯ ದಿವಸ ಸುಗಮವಾಗಿ ಸಭೆಯು ನಡೆಯುವುದಕ್ಕೆ ಅವಕಾಶ ಮಾಡಿಕೊಡದೆ ಹೋದರೆ ನೀವು ನಿಸ್ಸಹಾಯಕರಾಗುತ್ತೀರಿ, ನಾವು ಕೂಡ ನಿಸ್ಸಹಾಯಕರಾಗುತ್ತೇವೆ.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ ನಾನು ಏನು ಹೇಳುವಂಥಾದ್ದು ಒಂದು ಸಂದರ್ಭವಿಲ್ಲದಿದ್ದರೂ ತಾವು ಒತ್ತಾಯ ತಂದಿರತಕ್ಕಂಥ ಸಂದರ್ಭದಲ್ಲಿ ನಾನು ಹೇಳಬೇಕಾದ್ದು ಇಷ್ಟೇ. ಮಾನ್ಯ ವಿರೋದಪಕ್ಷದ ನಾಯಕರು ಅವರು ಏನು ಹೇಳಿಕೆಯನ್ನು ಕೊಡ ಬೇಕಾದರೂ ಒಂದು ಕಾನೂನನ್ನು ಅನುಸರಿಸಿ ಕೊಡಬೇಕಾಗಿರುತ್ತದೆ. ಅವರ ಪ್ರಾರ್ಥನೆ ಇರುವುದು ಏನೆಂದರೆ ಪ್ರಶ್ನೋತ್ತರ ವೇಳೆಯನ್ನು ಮುಂದೂಡಬೇಕು, ಅದನ್ನು ಮನ್ನಮಾಡುವ ಬಗ್ಗೆ ಅನುಮತಿಯನ್ನು ಕೊಡಬೇಕೆಂದು ಕೇಳುತ್ತಾ ಇದ್ದಾರೆ. ತಾವು ಇದರ ಬಗ್ಗೆ ಈಗಾಗಲೆ ರೂಲಿಂಗ್ ಕೊಟ್ಟಿರುತ್ತೀರಿ. ಹಾಗೆ ಮಾಡುವುದಕ್ಕೆ ಆಗುವುದಿಲ್ಲವೆಂದು. ಸಭೆಯು ಸೇರಿದಮೇಲೆ ನಾವು ಪರ್ಮಿಟ್ ಮಾಡಲು ಸಾದ್ಯವಾಗುವುದಿಲ್ಲವೆಂದು ಈಗಾಗಲೇ ಹೇಳಿದ್ದೀರಿ.

ಮತ್ತೆ ಪ್ರಶ್ನೋತ್ತರ ವೇಳೆ ಇಲ್ಲ, ಅದು ಮುಗಿದುಹೋಯಿತು ಎಂದು ಮಾನ್ಯ ಜೆ. ಎಚ್. ಪಟೀಲರು ಹೇಳಿದರು. ತಮಗೆ ಗೊತ್ತಿರುವ ಹಾಗೆ ಎರಡು ಗಂಟೆಗಳ ಕಾಲವಾದರೂ ಸಭೆಯು ಸೇರಲೇ ಇಲ್ಲ. ಅದಕ್ಕೂ ತಾವು ಈಗಾಗಲೇ ಉತ್ತರ ಕೊಟ್ಟಿದ್ದೀರಿ. ಹಿಂದೆ ಪ್ರಶ್ನೋತ್ತರ ವೇಳೆಯನ್ನು ಮುಂದುವರಿಸಬೇಕಿದ್ದರೆ, ಅಥವಾ ಇನ್ನೊಂದು ದಿವಸಕ್ಕೆ ಮುಂದೂಡಬೇಕಿದ್ದರೆ ಅಂಥ ಸಂದರ್ಭಗಳಲ್ಲಿ ಅಧ್ಯಕ್ಷರು ಸಭೆಯ ಅನುಮತಿಯನ್ನು ತೆಗೆದುಕೊಂಡು ಮುಂದೂಡಿದ್ದಾರೆ. ಅದರ ಬಗ್ಗೆ ರೂಲ್ ಪ್ರಕಾರವಾಗಿ ಅವರದೇಯಾದ ಅಧಿಕಾರವಿರುತ್ತದೆ. ಅವರು ಅಧಿಕಾರವನ್ನು ಉಪಯೋಗಿಸಿಕೊಳ್ಳ ತಕ್ಕಂಥ ಸಂದರ್ಭದಲ್ಲಿ ಸಭೆಯ ಒಪ್ಪಿಗೆಯಂತೆ ಅದನ್ನು ಮುಂದುವರಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ಸಂದರ್ಭದಲ್ಲಿ ಸಬ್ಜಕ್ಟ್ ಮ್ಯಾಟರ್ ಏನು ಎಂದು ತಿಳಿಸಿದ್ದರೆ ನಾನು ಅದರ ಬಗ್ಗೆ ಮಾತನಾಡುತ್ತಿದ್ದೆ. ಸಬ್ಜಕ್ಟ್ ಮ್ಯಾಟರ್ ಏನು ಎನ್ನುವುದೇ ಗೊತ್ತಿಲ್ಲ. ಸುಮ್ಮನೆ ನಾನು ಒಂದು ಹೇಳಿಕೆಯನ್ನು ಕೊಡುತ್ತೇನೆಂದು ವಿರೋದಪಕ್ಷದ ನಾಯಕರು ಹೇಳುತ್ತಿದ್ದಾರೆ. ಆ ರೀತಿ ಹೇಳಿಕೆ ಕೊಡ ಬೇಕಾದರೂ ಅಧ್ಯಕ್ಷರ ಅನುಮತಿ ಬೇಕಾಗಿರುತ್ತದೆ. ತಾವು ಅನುಮತಿಯನ್ನು ಕೊಟ್ಟರೆ ನಮ್ಮದೇನು ಅಬ್ಯಂತರವಿಲ್ಲ. ಅದಕ್ಕೂ ಕೆಲವು ನಿಯಮಗಳು ಇವೆ. ಪ್ರಶ್ನೋತ್ತರಗಳನ್ನು ಮೊದಲು ತೆಗೆದು ಕೊಳ್ಳಬೇಕು. ಅನಂತರ ಹೇಳಿಕೆ ಕೊಡಬೇಕು. ಹಾಗೆ ಮಾಡುವುದು ಸೂಕ್ತ, ಅವರು ಯೋಚನೆ ಮಾಡಲಿ. 'ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಆಫ್ ಪಾರ್ಲಿಮೆಂಟ್ ಬೈ ಕೌಲ್ ಅಂಡ್ ಶಕ್ಧರ್', ಪೇಜ್ ನಂಬರ್ ೩೩೯ ರಲ್ಲಿ ಒಂದು ಸಂದರ್ಭದ ಬಗ್ಗೆ ಅವರು ಏನು ಹೇಳಿದ್ದಾರೆ ಎನ್ನುವುದನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ.

5-00 P.M.

On page 379 of the Practice and Procedure of Parliament by Kaul and Shakder, it is stated :

> "The House agreeing unanimously, Question Hour may be dispensed with for the purpose of devoting more time to other business before the House. Such instances have, however, been rare. In such cases the normal practice is that all starred questions for the day are treated as unstarred and their answers together with answers to the unstarred questions, if any, are printed in the Official Report for that day. There have, however, been instances when such questions (both starred and unstarred) were, with the agree-

ment of the House, transferred in toto to another date for which no question time had been allotted."

ಹೀಗೆ ಪ್ರಾಕ್ಟೀಸ್ ಇರುವುದು. ಈಗಾಗಲೇ ನಾವು ಇದಕ್ಕೆ ಅವಕಾಶ ಕೊಟ್ಟಿರುವುದರಿಂದ ನಾನು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಬಹಳ ವಿನಯದಿಂದ ಅರಿಕೆ ಮಾಡಿಕೊಳ್ಳುವುದೇನೆಂದರೆ, ಅವರು ಇದರಬಗ್ಗೆ ಪರ್ಸಿಸ್ಟ್ ಮಾಡಬೇಕಾದ ಕಾರಣವೇನೂ ಇಲ್ಲ. ನಾವು ಹೊರಗಡೆ ಏನೇನು ಮಾತನಾಡುತ್ತೇವೆ ಅದನ್ನೆಲ್ಲಾ ಈ ಸದನದಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಒಟ್ಟಿನಲ್ಲಿ ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ಕೇಳಿಕೊಳ್ಳುವುದೇನೆಂದರೆ ಮಾನ್ಯ ಅಧ್ಯಕ್ಷರು ಕಾನೂನು ಪ್ರಕಾರ ಏನು ಮಾಡುವುದಕ್ಕೆ ಸಾಧ್ಯ ಎಂಬುದನ್ನು ತಿಳಿಸಿದ್ದಾರೆ ಅದನ್ನು ಒಪ್ಪಿಕೊಂಡು ಈ ಸಭೆಯ ಕಾರ್ಯಕಲಾಪಗಳು ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ರೂಲ್ ೩೨ ಏನು ಹೇಳುತ್ತವೆ ಎಂಬುದನ್ನು ಮಾತ್ರ ಇಲ್ಲಿ ಹೇಳಬಯಸುತ್ತೇನೆ. ಅದು ಈ ರೀತಿ ಇದೆ.

"Unless the Speaker otherwise directs, the first hour of every day of meeting shall be available for the asking and answering of questions."

ಇವತ್ತಿನ ಸಂದರ್ಭ ಏನಿದೆ ಎಂಬುದನ್ನು ತಾವು ಅರ್ಥಮಾಡಿಕೊಂಡು ಜನತೆಗೆ ಅವಶ್ಯಕವಾಗಿ ಬೇಕಾಗಿರತಕ್ಕ ರಕ್ಷಣೆಯನ್ನು ಕೊಡಬೇಕು.

ಅಧ್ಯಕ್ಷರು—ಮಾನ್ಯ ವಿರೋಧಪಕ್ಷದ ನಾಯಕರಿಗೆ ಕಾನೂನು ಪ್ರಕಾರ ನಾನು ಏನು ಹೇಳಬಹುದು, ಏನು ಮಾಡಬಹುದೆಂಬುದನ್ನು ಈಗಾಗಲೇ ತಿಳಿಸಿದ್ದೇನೆ.

ಶ್ರೀ ಭೀಮಣ್ಣ ಖಂಡ್ರೆ—ಸ್ವಾಮಿ, ಬೇಲಿಯೇ ಎದ್ದು ಹೊಲ ಮೇಯುವುದಕ್ಕೆ ಹೋದಾಗ ನಾವು ಯಾರನ್ನು ಕೇಳಬೇಕು ? When the Government is spreading poison in the country and they are burning the country, you please give us protection. Please see rule 50.

"Subject to the provisions of these rules motion for an adjournment of the business of the Assembly for the purpose of discussing a definite matter of urgent public importance may be made with the consent of the Speaker."

The motion can be either in writing or oral.

ಅಧ್ಯಕ್ಷರು—ತಾವು ಏನ್ಓದುತ್ತಿದ್ದೀರಿ ಅದನ್ನು ಸರಿಯಾಗಿ, ಜೆನ್ನಾಗಿ ಓದಿ, ಅದರಲ್ಲಿರುವುದು, Rule 50 may be read with rule 51 and notice should be in writing.

SRI BHIMANNA KANDRE.—According to rule 51 the notice should be given to the Secretary two hours before the commencement of the sitting. According to rule 322 any member may move for suspension of rules. So this is legal.

ಶ್ರೀ ಬಿ. ವಿ. ಕಕ್ಕೆಲಾಯ.—ಸ್ವಾಮಿ, ರೂಲ್ ೩೨ ಸ್ಪಷ್ಟವಾಗಿ ಇದೆ.

SRI B. V. PATTAR.—My submission is that rule 32 is wrongly interpreted by my friends. Chapter VII deal with only questions. The words "unless the Speaker otherwise directs" refers only to questions. It does not make provision for statement by anybody. So, the right interpretation of this rule would be, unless the Speaker otherwise directs the Speaker cannot postpone the question hour. It cannot be interpreted to give any priority or right to make any statement.

† ಶ್ರೀ ಬಿ. ವಿ. ಕಕ್ಕಿಲಾಯ (ವಿಟ್ಲ)—ಪ್ರಶ್ನೋತ್ತರ ವೇಳೆ ಏನಿದೆ ಅದು ಈ ಸಭೆಯ ಆರಂಭದಲ್ಲೇ ಆಗಬೇಕೆಂದಿದೆ. ಆದರೆ ಅದನ್ನು ಬೇರೆ ಸಂದರ್ಭದಲ್ಲಿ ತೆಗೆದುಕೊಳ್ಳಲು ತಮಗೆ ಅಧಿಕಾರವಿದೆ. ಆದರೆ ನಾನು ಹೇಳುವುದೇನೆಂದರೆ ಈ ಪ್ರಶ್ನೋತ್ತರ ವೇಳೆ ಏನಿದೆ ಇದು ಬಹಳ ಅಮೂಲ್ಯವಾದದ್ದು. ಸರ್ಕಾರಿ ಕಾರ್ಯಕಲಾಪಗಳಿಗೆ ಸೀಮಿತವಾದ ಈ ವೇಳೆಯನ್ನು ತಮಗೆ ಇಷ್ಟಬಂದ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದು ಸರಿಯಲ್ಲ. ನಮ್ಮ ಕ್ಷೇತ್ರದ ಸಮಸ್ಯೆಗಳನ್ನು ತಿಳಿಸುವುದಕ್ಕೆ ಇರುವ ಈ ಸಮಯವನ್ನು ತಾವು ಮೊಟಕು ಮಾಡುವುದಾದರೆ ಎಲ್ಲ ಸದಸ್ಯರ ಹಕ್ಕು ಬಾಧ್ಯತೆಗಳನ್ನೂ ತಾವು ಮೊಟಕು ಮಾಡಿದಂತಾಗುತ್ತದೆ. ಈ ರೀತಿ ಮಾಡುವುದು, ಯಾವ ಕಾರಣದಿಂದಲೂ ಸರಿಯಲ್ಲ. ಆದ್ದರಿಂದ ಈ ಪ್ರಶ್ನೋತ್ತರ ವೇಳೆಯನ್ನು ಮೊಟಕು ಮಾಡಬಾರದೆಂದು ನನ್ನ ಪ್ರಾರ್ಥನೆ.

ಅಧ್ಯಕ್ಷರು—ಈಗ ಎಲ್ಲ ಮಾನ್ಯ ಸದಸ್ಯರುಗಳೂ ಒಬ್ಬೊಬ್ಬರಾಗಿ ಮಾತನಾಡುವುದಕ್ಕೆ ಪ್ರಾರಂಭ ಮಾಡಿದರೆ ಈ ಸಭೆಯ ಅಮೂಲ್ಯ ವೇಳೆ ಹಾಳಾಗುತ್ತದೆ. ಆದುದರಿಂದ ಮಾನ್ಯ ವಿರೋಧಪಕ್ಷದ ನಾಯಕರು ತಮ್ಮ ಅಭಿಪ್ರಾಯವನ್ನು ಹೇಳಬೇಕು.

† ಶ್ರೀ ಎಸ್ ಆರ್. ಬೊಮ್ಮಾಯಿ (ಹುಬ್ಬಳ್ಳಿ).—ಮಾನ್ಯ ಮುಖ್ಯ ಮಂತ್ರಿಯವರು ಈ ವಿಚಾರದ ಬಗ್ಗೆ ತಮ್ಮ ಹೇಳಿಕೆಯನ್ನು ಕೊಡುವಾಗ ಇದರಲ್ಲಿ ಮಾನ್ಯ ಅಧ್ಯಕ್ಷರಿಗೆ ಅಧಿಕಾರವಿದೆ, ಅವರು ಇದಕ್ಕೆ ತಮ್ಮ ಒಪ್ಪಿಗೆ ಕೊಡುವುದಾದರೆ ಅದಕ್ಕೆ ತಮ್ಮ ಅಭ್ಯಂತರವೇನೂ ಇಲ್ಲವೆಂದು ಹೇಳಿದ್ದಾರೆ. ಅದೇ ರೀತಿ ಮಾನ್ಯ ಸದಸ್ಯರಾದ ಶ್ರೀಮಾನ್ ಕಕ್ಕಿಲಾಯರವರೂ ಕೂಡ ಈ ಪ್ರಶ್ನೋತ್ತರ ಕಾಲವನ್ನು ಯಾವುದೇ ಕಾರಣಕ್ಕೂ ಮೊಟಕು ಮಾಡಬಾರದೆಂದು ಹೇಳಿದ್ದಾರೆ. ಪ್ರಶ್ನೋತ್ತರ ಕಾಲವನ್ನು ಮುಂದೆ ಹಾಕಿ ಇತರೆ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಹಿಂದೆ ಎಷ್ಟೋ ಸಾರಿ ಒಪ್ಪಿದ್ದೇವೆ. ಎರಡು ಮೂರು ದಿವಸಗಳ ಕಾಲ ಪ್ರಶ್ನೋತ್ತರಕಾಲವನ್ನೇ ತೆಗೆದುಕೊಳ್ಳದೆ ಮುಂದೆ ಹಾಕಿ ಬೇರೆ ಮುಖ್ಯವಾದ ವಿಚಾರಗಳನ್ನು ಚರ್ಚೆ ಮಾಡಿರುವಂಥ ಸಂದರ್ಭಗಳಿವೆ. ಸಭೆಯ ಒಪ್ಪಿಗೆ ಪಡೆದು ಬಿಸಿನಸ್ ಅಡ್ವೈಸರಿ ಕಮಿಟಿ ಒಪ್ಪಿಗೆಯನ್ನೂ ಪಡೆದು ಈ ರೀತಿ ಮಾಡಿದ್ದೇವೆ.

ಶ್ರೀ ಕೆ. ಎಚ್. ರಂಗನಾಥ್.—ಬಿಸಿನೆಸ್ ಅಡ್ವೈಸರಿ ಕಮಿಟಿ ವರದಿಗೂ ಕೂಡ ಈ ಸಭೆಯಂ ಒಪ್ಪಿಗೆ ಪಡೆಯಂಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವಶ್ಯ ಬಿದ್ದಾಗ ಪ್ರಶ್ನೋತ್ತರ ಕಾಲವನ್ನು ಮುಂದೆ ಹಾಕಿದ್ದೇವೆ, ಅದನ್ನು ಮೊಟಕುಗೊಳಿಸಿದ್ದೇವೆ. ಕೆಲವು ಮಹತ್ವದ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾದ ಸಂದರ್ಭ ಬಂದಾಗ ಪ್ರಶ್ನೋತ್ತರ ಕಾಲವನ್ನು ಸಭೆಯ ಒಪ್ಪಿಗೆ ಪಡೆದು ಮುಂದೆ ಹಾಕಿದಂಥ ನಿದರ್ಶನಗಳು ಹಿಂದೆ ಎಷ್ಟೋ ಇವೆ. ಆ ತರಹ ನಡವಳಿಕೆಗಳು ಸಂಪ್ರದಾಯಗಳು ಹಿಂದಿನಿಂದ ಇವೆ. ನಾನು ಇವತ್ತಿನ ದಿವಸ ಏನು ಹೇಳುತ್ತಿದ್ದೇನೆಂದರೆ ಅಂಥ ಒಂದು ಮಹತ್ವವಾದ ವಿಚಾರ ಇಲ್ಲಿದ್ದು ಆ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೋರಿ ಕಳೆದ ನಾಲ್ಕು ಗಂಟೆಗಳಿಂದ ಪ್ರಯತ್ನ ಮಾಡುತ್ತಿದ್ದೇವೆ ಅಧ್ಯಕ್ಷರ ಅಪ್ಪಣೆಯನ್ನು ಪ್ರಶ್ನೋತ್ತರ ಕಾಲವನ್ನು ಮುಂದಕ್ಕೆ ಹಾಕುವುದಕ್ಕೆ ಬೇಡುತ್ತಿದ್ದೇವೆ. ಇದರ ಹಿನ್ನೆಲೆಯನ್ನು ಮತ್ತು ಸದಸ್ಯರ ತೀವ್ರವಾದ ಭಾವನೆಯನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಪ್ರಶ್ನೋತ್ತರ ಕಾಲವನ್ನು ಮುಂದೂಡುವುದಕ್ಕೋಸ್ಕರ ಹಿಂದೆ ಎಲ್ಲಾ ಸರ್ಕಾರದವರು ಕೇಳಿದಾಗ ನಾವು ಯಾವರೀತಿ ಒಪ್ಪಿಗೆ ಕೊಟ್ಟಿದ್ದೇವೆಯೋ ಅದೇ ರೀತಿ ಅವರೂ ಈಗ ಕೊಡಬೇಕು. ಒಂದು ಮಹತ್ವದ ವಿಚಾರವನ್ನು, ಸರ್ಕಾರದ ಆಡಳಿತಕ್ಕೆ ಸಂಬಂಧಪಟ್ಟಂಥ ಕಾನೂನು ವ್ಯವಸ್ಥೆಗೆ ಸಂಬಂಧಪಟ್ಟಂಥ ವಿಚಾರವನ್ನು ಹೇಳುವುದಕ್ಕೆ ಅವಕಾಶ ಕೊಡಬೇಕೆಂದು ನಾಲ್ಕು ಗಂಟೆಯಿಂದ ಪ್ರಯತ್ನ ಮಾಡಿದರೂ ಇದಕ್ಕೆ ಒಪ್ಪಿಗೆ ಕೊಡದೇ ಇದ್ದರೆ ಈ ಬಗ್ಗೆ ನಾವು ಏನು ಅರ್ಥ ಮಾಡಿಕೊಳ್ಳಬೇಕು? ನಾವು ಇಷ್ಟೆಲ್ಲಾ ವಿನಯಪೂರ್ವಕವಾಗಿ ಕೇಳಿಕೊಂಡರೂ ವಿರೋಧಪಕ್ಷದವರ ಮಾತಿಗೆ ಮನ್ನಣೆ ಕೊಡುವುದಕ್ಕೆ ತಯಾರಿಲ್ಲದೆ ತಪಂಗೆ ಬಹುಮತವಿದೆ ಎಂದು ನಡೆದುಕೊಳ್ಳುವ ಸರ್ಕಾರದ ಧೋರಣೆ ಸರಿಯಲ್ಲ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ, ದಯವಿಟ್ಟು ಈಗಲಾದರೂ ಇದಕ್ಕೆ ಅವಕಾಶ ಮಾಡಿಕೊಡಿ. ಇಷ್ಟೊಂದು ಒತ್ತಾಯಪೂರ್ವಕವಾಗಿ ನಾವು ಕೇಳುತ್ತಿರಬೇಕಾದರೆ ಇದರಲ್ಲಿ ಒಂದು ಮಹತ್ವವಾದ, ಗಹನವಾದ ವಿಚಾರ ಅಡಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ನಮ್ಮ ಹೇಳಿಕೆಯನ್ನು ಕೇಳಿ ನಂತರ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬಹುದು. ಆದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಸೂಚಿಸಬಹುದು. ನನಗನ್ನಿಸುತ್ತದೆ, ನನ್ನ ಹೇಳಿಕೆಯನ್ನು ಕೇಳಿದಮೇಲೆ

ಮಾನ್ಯ ಮುಖ್ಯಮಂತ್ರಿಗಳು ನಮ್ಮ ಬೇಡಿಕೆಯನ್ನು ಒಪ್ಪುತ್ತಾರೆ ಎಂಬ ಸಂಪೂರ್ಣವಾದ ಭರವಸೆ ನನಗಿದೆ. ನಾವು ಹೇಳುವಂಥ ವಿಚಾರ ಅಷ್ಟು ಮಹತ್ವವಾದುದು, ಸತ್ಯವಾದುದು, ಸಾರ್ವಜನಿಕ ಮಹತ್ವವನ್ನು ಪಡೆದಿರುವಂಥದ್ದು. ಆದ್ದರಿಂದ ನಮ್ಮ ಬೇಡಿಕೆಯನ್ನು ಒಪ್ಪುತ್ತಾರೆ ಎಂಬ ನಂಬಿಕೆ ನನಗಿದೆ. ಮಾನ್ಯ ಜೆ. ಎಚ್. ಪಟೇಲ್ ಅವರು ಪ್ರಶ್ನೋತ್ತರ ಕಾಲದ ಬಗ್ಗೆ ಏನು ಅಭಿಪ್ರಾಯವು ವ್ಯಕ್ತಪಡಿಸಿದ್ದಾರೆ ಅದರ ಬಗ್ಗೆ ತಾವು ನಿರ್ಣಯ ಕೊಡಿ. ನಾನು ಮತ್ತೊಮ್ಮೆ ಎಲ್ಲ ಸದಸ್ಯರನ್ನೂ ಮತ್ತು ತಮ್ಮನ್ನು ಕೇಳಿಕೊಳ್ಳುತ್ತೇನೆ. ಈಗ ಪ್ರಶ್ನೋತ್ತರ ಕಾಲವನ್ನು ಮುಂದಕ್ಕೆ ಹಾಕಿ ನಾವು ಹೇಳಿಕೆಯನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಿ.

† ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಬೊಮ್ಮಾಯಿಯವರು ಸರ್ಕಾರದ ಮೇಲೆ ತಪ್ಪು ಹೊರಿಸುವುದಕ್ಕೆ ಬಹಳ ಪ್ರಯತ್ನ ಪಡುತ್ತಿದ್ದಾರೆ. ಆದರೆ ಅವರ ಪ್ರಯತ್ನ ಸಫಲವಾಗುವುದಿಲ್ಲ. ಈಗ ನಾಲ್ಕು ಗಂಟೆಗಳ ಕಾಲ ಸಮಯ ವ್ಯರ್ಥವಾಗಿರುವುದಕ್ಕೆ ಜವಾಬ್ದಾರರು ನಾವಲ್ಲ. ನಾಲ್ಕು ಗಂಟೆಗಳ ಕಾಲವನ್ನು ಹೀಗೆ ಕಳೆಯುವುದರ ಬದಲು ಒಂದು ಗಂಟೆ ಪ್ರಶ್ನೋತ್ತರ ಕಾಲಕ್ಕೆ ಅವಕಾಶ ಮಾಡಿಕೊಟ್ಟಿದ್ದರೆ ಇಷ್ಟು ಹೊತ್ತಿಗೆ ಬೊಮ್ಮಾಯಿಯವರು ಅವರ ಹೇಳಿಕೆಯನ್ನು ಕೊಡುವುದಕ್ಕೂ ಅನುಕಾಶವಾಗುತ್ತಿತ್ತೋ ಏನೋ. ಒಂದು ಗಂಟೆಗಳ ಕಾಲ ಸಮಾಧಾನದಿಂದ ಇರುವುದಕ್ಕೆ ಅವರ ಕೈಯ್ಯಲ್ಲಿ ಆಗಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಅವಕಾಶ ಕೊಡಲಿಲ್ಲವಲ್ಲ ಸ್ವಾಮಿ,

ಶ್ರೀ ಡಿ. ದೇವರಾಜ ಅರಸ್.—ನೀವೇ ಬೇಕು ಅಂತ ಅವಕಾಶ ಮಾಡಿಕೊಂಡಿಲ್ಲ. ನಾವು ಮಾನ್ಯ ವಿರೋಧಪಕ್ಷದನಾಯಕರಿಗೆ ಸಲ್ಲತಕ್ಕ ಗೌರವವನ್ನು ಕೊಡುವುದಕ್ಕೆ ಹಿಂದೆಯೂ ಹಿಂಜರಿದಿಲ್ಲ, ಇಂದೂ ಹಿಂಜರಿಯಲಿಲ್ಲ, ಮುಂದೆಯೂ ಹಿಂಜರಿಯುವುದಿಲ್ಲ. ಆದರೆ ಅವರಿಗೆ ಕೊಟ್ಟಿರತಕ್ಕ ಗೌರವವನ್ನು ಉಳಿಸಿಕೊಂಡು ಯಾವರೀತಿ ನಡೆದುಕೊಂಡುಹೋಗಬೇಕು ಎಂಬುದು ಅವರಿಗೆ ಸೇರಿದ್ದು. ಎಂಥ ಗಹನವಾದ ವಿಚಾರವಾಗಿದ್ದರೂ ಕೂಡ ಪ್ರಶ್ನೋತ್ತರಕಾಲ ಮುಗಿದ ನಂತರ ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯ ಮುಂದೆ ತರುವುದಕ್ಕೆ ಆಡಚಣೆ ಏನಿತ್ತು ಎಂಬುದು ನನಗೆ ಇನ್ನೂ ಅರ್ಥವಾಗಿಲ್ಲ. ಪ್ರಶ್ನೋತರ ಕಾಲವನ್ನು, ತೆಗೆದುಹಾಕಬೇಕು, ನನ್ನ ಹೇಳಿಕೆಯೇ ಮೊದಲು ಆಗಬೇಕು ಎಂದು ಅವರು ಹಠ ಮಾಡುವುದು ಸರಿಯಲ್ಲ ಎಂದು ಈಗಲೂ ಹೇಳುತ್ತಿದ್ದೇನೆ. ಹಿಂದೆ ಎಷ್ಟೋ ಸಾರಿ ಈ ತರಹ ಪ್ರಶ್ನೋತ್ತರ ಕಾಲವನ್ನು ಮುಂದೂಡಿರುವ ನಿದರ್ಶನಗಳಿವೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಅಪ್ಪಣೆ ಕೊಡಿಸಿದ್ದಾರೆ. ಹಿಂದೆ ಸರ್ಕಾರಿ ಕಾರ್ಯಕಲಾಪಗಳಾತಲೇ ಅಲ್ಲ ಬೇರೆ ಬೇರೆ ಕೆಲವು ತುರ್ತಾದ ಕೆಲಸಗಳು ನಡೆಯಬೇಕು ಎಂಬ ದೃಷ್ಟಿಯಿಂದ ಈ ಮನೆಯ ಒಪ್ಪಿಗೆ ಪಡೆದು ಆ ರೀತಿ ಮಾಡಿರಬಹುದು, ಬೇರೆ ಇನ್ಯಾವ ಉದ್ದೇಶದಿಂದಲೂ ಅಲ್ಲ.

ಶ್ರೀ ಎಚ್. ಗಂಗಾಧರನ್.—ಪ್ರಶ್ನೋತ್ತರ ಕಾಲವನ್ನು ಮುಂದೂಡುವುದಕ್ಕೆ ನಾವೆಲ್ಲಾ ಒಪ್ಪಿದ್ದೇವೆ, ನಿಮ್ಮ ಕಡೆಯವರನ್ನೂ ಒಪ್ಪಿಸಿಬಿಡಿ,

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಗಂಗಾಧರನ್ ಅವರು ಏನು ತಿಳಿದುಕೊಂಡಿದ್ದಾರೆಂದರೆ ಅವರೊಬ್ಬರು ಒಪ್ಪಿಬಿಟ್ಟರೆ ಈ ಮನೆಯೇ ಒಪ್ಪಿದಹಾಗೆ ಅಂತ ತಿಳಿದುಕೊಂಡಿದ್ದಾರೆ.

ಶ್ರೀ ಜಿ. ಮಾದೇಗೌಡ.—ಹಿಂದೆ ಎಲ್ಲಾ ನಿಮ್ಮ ಅನುಕೂಲಕ್ಕೋಸ್ಕರ ನಾವೂ ಒಪ್ಪಿದ್ದೇವೆ, ಅದೇ ರೀತಿ ಈಗ ನಮ್ಮ ಅನುಕೂಲಕ್ಕೋಸ್ಕರ ನೀವೂ ಒಪ್ಪಿಕೊಳ್ಳಿ.

ಶ್ರೀ ಡಿ. ದೇವರಾಜ ಅರಸ್ —ಈಗ ನಾಲ್ಕು ಗಂಟೆಗಳಿಂದ ಸುಮ್ಮನೆ ಕಾಲ ಕಳೆದಿದ್ದೀರಿ. ಇನ್ನು ಒಂದು ಗಂಟೆಗಳ ಕಾಲ ಪ್ರಶ್ನೋತ್ತರಕಾಲಕ್ಕೆ ಅವಕಾಶ ಕೊಟ್ಟರೆ ನಿಮ್ಮ ವಿಚಾರದ ಗಹನತೆ ಹೊರಟು ಹೋಗುತ್ತದೆಯೇ? ಒಂದು ಗಂಟೆಗಳ ಕಾಲ ತಾವು ಅವಕಾಶ ಮಾಡಿಕೊಟ್ಟಿದ್ದರೆ ಇಷ್ಟುಹೊತ್ತಿಗೆ ತಮಗೆ ಹೇಳಿಕೆ ಕೊಡುವುದಕ್ಕೆ ಅವಕಾಶ ಸಿಕ್ಕುತ್ತಿತ್ತೋ ಏನೋ. ಆ ರೀತಿ ವಿರೋಧಪಕ್ಷದವರು ಮಾಡಬಹುದಾಗಿತ್ತಲ್ಲಾ. ಅದನ್ನು ಬಿಟ್ಟು ಪುನಃ ಪುನಃ ಪ್ರಶ್ನೋತ್ತರಕಾಲವನ್ನು ಮುಂದಕ್ಕೆ ಹಾಕಿ ಎಂದು ಒತ್ತಾಯ ಮಾಡುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಆ ರೀತಿ ಮಾಡುವುದು ಬೇಡ. ಯಾವ ವಿಷಯವನ್ನು ಸಭೆಯ ಮುಂದೆ ತರಬೇಕಾದರೂ ಅದಕ್ಕೆ ಒಂದು ಮಾರ್ಗ ಬೇಕು. ಆ ಮಾರ್ಗದಲ್ಲಿ ನೀವು ತೆಗೆದುಕೊಂಡಿ ಬನ್ನಿ. ನೀವು ಯಾವ ವಿಷಯವನ್ನು ತೆಗೆದುಕೊಂಡುಬರಬೇಕೆಂದಿದ್ದೀರೋ ಅದನ್ನು ತರುವುದಕ್ಕೆ ನನ್ನ ಅಡ್ಡಿ ಇಲ್ಲ, ಅದಕ್ಕೆಲ್ಲಾ ಕೆಲವು ಮಾರ್ಗಗಳಿವೆ. ಅಡ್ಜರ್ನ್‌ಮೆಂಟ್ ಮೋಷನ್

ಮೂಲಕ ತರಬಹುದು, ಅಥವಾ ಬೇರೆ ತರಹ ಮೋಷನ್ ಮೂಲಕ ತರಬಹುದು, ಅಡ್ಜರ್ನ್‌ಮೆಂಟ್ ಮೋಷನ್ ಮೂಲಕ ತಂದರೆ ಅದಕ್ಕೆ ಹೆಚ್ಚು ಪ್ರಿಯಾರಿಟಿ ಇರುತ್ತದೆ ಅಥವಾ ಬೇರೆ ಯಾವುದಾದರೂ ಮೋಷನ್ ಮೂಲಕ ತಂದು ಒಂದು ದಿವಸವೆಲ್ಲಾ ಚರ್ಚೆ ಮಾಡೋಣ ಎಂದರೆ ಮಾಡೋಣ. ಆದರೆ ಈಗ ಪ್ರಶ್ನೋತ್ತರ ಕಾಲವನ್ನು ಮುಂದೂಡಬೇಕು, ನನ್ನ ಹೇಳಿಕೆಯೇ ಮೊದಲು ಆಗಬೇಕು ಎಂದು ಹಠ ಹಿಡಿದುಕೊಂಡು ಕುಳಿತಿರುವುದು ಸರಿಯಲ್ಲ.

ಶ್ರೀ ಎಚ್. ಗಂಗಾಧರನ್.—ನಾವು ಆಡುವ ಒಂದೆರಡು ಮಾತುಗಳನ್ನು ಕೇಳುವಷ್ಟು ಸೌಜನ್ಯತೆಯೂ ನಿಮ್ಮಲ್ಲಿಲ್ಲ. ನಾವು ಒಂದೆರಡು ಮಾತುಗಳನ್ನು ಆಡಿದನಂತರ ನೀವು ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ? ೧೪ನೇ ಶತಮಾನದಲ್ಲಿ ಪಾರ್ಲಿಮೆಂಟಿಗೆ ಜೆಂಕಿ ಬಿದ್ದಾಗ ಯಾರ ಅಭಿಪ್ರಾಯವನ್ನೂ ಕೇಳದೇ ಅದನ್ನು ಮುಂದೂಡಿದ್ದಾರೆ... ..

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ. ಹಾಗೆಲ್ಲಾ ಮಧ್ಯೆಮಧ್ಯೆ ಎದ್ದು ಮಾತನಾಡಬೇಡಿ.

† C. M. ARMUGHAM (K. G. F.).—Mr. Speaker, Sir, I was not able to follow what all happended in this House. Right from the beginning there was shouting and noice. I would like to know from the Chair what is going on in this House. I am not in the habit of shouting. Is it that we are now in the Question Hour ?

SRI A. LAKSHMISAGAR.—May I request you, Sir, to explain to him about what is going on ?

SRI C. M. ARMUGHAM.—I am requesting the Hon'ble Speaker to let me know what is going on. If you say that this is a question hour, you must say in the words and then stick to it. You have all the powers and that power must be used now. If you do not use your power, then this sort of affair will continue for another five hours. I shall read the relevant rule for the benefit of the House. The Speaker so far as the question hour is concerned has all the powers-he can suspend or need not suspend. This power cannot be questioned by anybody. He can extend the question hour for two hours also. If it is a question hour, we love to adhere to it. If the Leader of the Opposition wants the question hour to be suspended, the Speaker can consider his suggestion. Unless some declaration is made in this regard, this sort of statement will continue for ever. We have come here not as onlookers but to participate in the debate. This House is not mant for such wranglings. We the legislators have come here to debate certain propositions.

(There was thumping of desks by the members of the ruling party)

I do not want any thumping by the members.

SRI MALLUR ANANDA RAO.—We have understood the hon'ble member,

SRI HON. MEMBER..—We have heard the hon'ble member sufficiently.

SRI B. V. KAKKILAYA.—We will have to hear from him much more. No member has the right to take away the privilege of the hon'ble member.

SRI C. M. ARMUGAM.—If the Speaker says that it is a question hour, I do not think that anybody can question the ruling of the Chair but the Chair has to declare it. The Speaker cannot keep the House in vacuum. He can direct the House. I beg of the Speaker to let me know where we stand ? If the Speaker says that it is a question hour, then he can direct the members to put questions and elicit information.

SRI P. RAMDEV.—I raise a point of order Sir.

SRI K. BHASKAR NAIDU.— The Hon'ble member Sri Armugam must be allowed to have his full say in the matter.

SRI C. M. ARMUGAM.—The hon'ble members need not feel that I am teaching the Hon'ble Speaker but I am only pointing out the relevant rule to come to a correct decision. We, the members have to assist the Speaker to come to a correct decision; otherwise we will be failing in our duty. We have elected the Speaker to preside over the deliberations of this House. Shouting in this House is not uncommon, but I want to know what is going on in this House for the last few hours. I have a right to know from the Hon'ble Speaker. If you say that it is a question hour, then you must direct the House to adhere to rule. If it is not a question hour, then you please say that it is not question hour.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಈ ದಿವಸ ಪ್ರಶ್ನೋತ್ತರದ ಕಾಲವನ್ನು ಮುಂದೂಡಿ ಒಂದು ಗಹನವಾದ ವಿಷಯದ ಬಗ್ಗೆ ಅವರು ಒಂದು ಹೇಳಿಕೆಯನ್ನು ಕೊಡುವುದಕ್ಕೆ ತಮ್ಮ ಅನುಮತಿಯನ್ನು ಕೇಳಿಕೊಂಡಿದ್ದಾರೆ. ನಾವು ಗಳೆಲ್ಲರೂ ಕೂಡಿ ತಮ್ಮನ್ನು ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದೇವೆ. ಮಾನ್ಯ ಸಭಾ ನಾಯಕರು ಮಾತನಾಡುತ್ತಾ ಕಾನೂನು, ನಿಯಮಾವಳಿಗಳನ್ನು ಪಾಲನೆ ಮಾಡತಕ್ಕಂಥಾದ್ದು ನಮ್ಮೆಲ್ಲರ ಕರ್ತವ್ಯ ಅಂತ ಹೇಳಿದರು ಅದು ನಮ್ಮೆಲ್ಲರ ಕರ್ತವ್ಯವೂ ಕೂಡ ಹೌದು ಅದರಲ್ಲೂ ಸಭಾಧ್ಯಕ್ಷರಾಗಿ ತಾವು ನಿಯಮಾವಳಿಗಳನ್ನು ರಕ್ಷಣೆ ಮಾಡತಕ್ಕಂಥಾ ಜವಾಬ್ದಾರಿ ನಿಮ್ಮ ಮೇಲೆ ಇದೆ ಎಂಬುದನ್ನು ಕೂಡ ನಾನು ತಿಳಿದುಕೊಂಡಿದ್ದೇನೆ. ಈ ಸದನದ ಕಾರ್ಯಕಲಾಪದ ಅನುಭವದ ಮೇಲೆ ನಾನು ಈ ವಿಚಾರವನ್ನು ಹೇಳುತ್ತಿದ್ದೇನೆ. ನಾನು ಕಾನೂನು ಪಂಡಿತನಲ್ಲ. ಈ ರೀತಿಯ ಹೇಳಿಕೆಯನ್ನು ಕೊಡುವುದಕ್ಕೆ ಸಭೆಯ ನಿಯಮಾವಳಿಗಳ ಪ್ರಕಾರ ವಿರೋಧ ಪಕ್ಷದ ನಾಯಕರಿಗಾಗಲಿ, ಅಥವಾ ಸದಸ್ಯರಿಗಾಗಲೀ ಸಾಧ್ಯವಿಲ್ಲ. ಅದಕ್ಕೆ ಅವಕಾಶ ಇಲ್ಲ. ಅದನ್ನು ನಾನೂ ಕೂಡ ತಿಳಿದುಕೊಂಡಿದ್ದೇನೆ. ನಮ್ಮ ವಿರೋಧಪಕ್ಷದ ನಾಯಕರು ಏನು ಹೇಳಿದ್ದಾರೆಂದರೆ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರಾಗಿರುವ ಶ್ರೀಮಾನ್ ಸ್ಪೀಫನ್‌ರವರು ಇಂತಹ ಒಂದು ಹೇಳಿಕೆಯನ್ನು ಕೊಡುವುದಕ್ಕೆ ಅವಕಾಶವನ್ನು ಕೊಟ್ಟಿರುವುದನ್ನು ಉದಾಹರಣೆಯಾಗಿ ಕೊಟ್ಟು ಹೇಳಿದ್ದಾರೆ. ಆ ಒಂದು ಪ್ರಸಂಗವನ್ನು ತಾವು ಮಾನ್ಯತೆ ಮಾಡಿ ಇದು ಒಂದು ಸಂಪ್ರದಾಯವೆಂದು ತಾವು ತಿಳಿದುಕೊಂಡು ಅವರು ಹೇಳಿಕೆ ಕೊಡುವುದಕ್ಕೆ ಅವಕಾಶ ಮಾಡಿಕೊಡಬಹುದು. ಮಾನ್ಯ ಸಭಾ ನಾಯಕರು ನಿಯಮಾವಳಿಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಿಯಮಾವಳಿಗಳ ಬಗ್ಗೆ ಹೇಳುವುದಾದರೆ ಹೇಳಿಕೆ ಕೊಡತಕ್ಕಂಥಾದಕ್ಕೆ ಅವಕಾಶ ಇಲ್ಲ. ಆದರೆ ಮಂತ್ರಿಗಳು ಹೇಳಿಕೆ ಕೊಡುವುದಕ್ಕೆ ಅವಕಾಶ ಇದೆ. ಇದು ಈ ಸಭೆಯ ನಿಯಮಾವಳಿಗಳಲ್ಲಿ

ಬರಬೇತ್ತದೆ. ಇದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆದರೆ ಈಗ ಇರತಕ್ಕಂತಹ ಸಮಸ್ಯೆ ಬಗ್ಗೆ ಇದು ಒಂದು ತೀವ್ರ ಸ್ವರೂಪದ ಸಮಸ್ಯೆ ಎಂಬುದನ್ನು ಈ ಸಂದರ್ಭದಲ್ಲಿ ಅದನ್ನು ಒಂದು ಹೇಳಿಕೆಯ ಮುಖಾಂತರ ಹೇಳುವುದಕ್ಕೆ ಅವಕಾಶವನ್ನು ಕೊಡಬೇಕೆಂದು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಅನುಮತಿಯನ್ನು ಕೊಡಬೇಕೆಂದು ಹೇಳಿದ್ದಾರೆ. ಇದನ್ನು ನಮ್ಮ ನಾಯಕರೂ ಕೂಡ ಪ್ರತಿ ಕಾದನೆ ಮಾಡಿದ್ದಾರೆ. ಮಾನ್ಯ ಸಭಾ ನಾಯಕರು ಈ ಮನೆಯ ಎರಡೂ ಕಡೆಯ ಸದಸ್ಯರು ಸಮ್ಮತಿ ಪಟ್ಟು ಪ್ರಶ್ನೋತ್ತರದ ಕಾಲವನ್ನು ವೆಂಟಿಕು ಮಾಡಬಹುದೆಂದು ಒಪ್ಪಿಕೊಂಡಿದ್ದಾರೆ. ಬಹುಶಃ ಆವರಿಗೆ ೩೦ ವರ್ಷಗಳ ಅನುಭವ ಇದೆ. ನನಗೆ ಸ್ವಲ್ಪ ಅನುಭವ ಇದೆ. ವಿರೋಧ ಪಕ್ಷದ ಕೆಲಸ ಕ್ಕೋಸ್ಕರವಾಗಿ ೩೦ ವರ್ಷಗಳ ಇತಿಹಾಸದಲ್ಲಿ ಪ್ರಶ್ನೋತ್ತರದ ಕಾಲವನ್ನು ಯಾರೂ ತೆಗೆದುಹಾಕಿಲ್ಲ. ಸಾಮಾನ್ಯವಾಗಿ ಸರ್ಕಾರದ ಕೆಲಸ ಕಾರ್ಯಗಳಿಗೆ ಅನುಕೂಲವಾಗಲೆಂದು ವಿರೋಧಪಕ್ಷದವರು ಸಹಕರಿಸಿ ದ್ದಾರೆ. ಆದರೆ ನಾವು ಇವತ್ತು ಇಲ್ಲಿ ಏನು ಹೇಳುತ್ತಿದ್ದೇವೆಂದರೆ ಈ ಒಂದು ತೀವ್ರ ಸ್ವರೂಪದ ಸಮಸ್ಯೆ ಬಗ್ಗೆ ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಡಲಿಕ್ಕೆ ಪ್ರಶ್ನೋತ್ತರದ ಕಾಲವನ್ನು ಮುಂದೂಡ ಲಿಕ್ಕೆ ಅನುಮತಿಯನ್ನು ಕೊಡಬೇಕೆಂದು ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದಾರೆ.

ಸಭೆಯ ಪ್ರಶ್ನೋತ್ತರ ಕಾಲವನ್ನು ರದ್ದು ಮಾಡುವುದಕ್ಕೆ ತಮಗೂ ಕೂಡ ಅಧಿಕಾರ ಇದೆ ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ಆದರೆ ಅದಕ್ಕೆ ಸಭೆಯ ಎರಡೂ ಕಡೆಯ ಒಪ್ಪಿಗೆ ಆಗಬೇಕು, ಸಭಾ ನಾಯಕರು ಒಪ್ಪಿಕೊಳ್ಳಬೇಕು. ಇದು ನಮ್ಮ ಮನವಿ ಅಷ್ಟೆ. ಅವರನ್ನು ಒಪ್ಪಿಸ ಲಿಕ್ಕೆ ಸಾಧ್ಯವಿಲ್ಲ. ಮನವಿಯನ್ನು ಇಟ್ಟಿದ್ದೇವೆ. ಮಾನ್ಯ ಆರ್ಮುಗಂರವರು ಹಿಂದೆ ಏನು ಹೇಳಿದ್ದಾರೆಂದರೆ, What he spoke in 1973 and what he speaks today, I want to bring to the notice of the House. He has said like this :—

> "MR C. M. ARMUGHAM :—I have great respect to you Madam Speaker; I have come here to protect my personal self-respect and the respect of the people who have elected me to this House".
>
> MR. C. M. ARMUGHAM.—What is the relevance?

5-30 P. M.

(ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಮಾನ್ಯ ದೇವೇಗೌಡರ ಕಡೆ ನೋಡಿದರು)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ದೇವೇಗೌಡರು ಮಾತನಾಡುವಾಗ ಈ ರೀತಿ ಮಾಡು ವುದು ಸರಿಯಲ್ಲ. ಒಬ್ಬ ಸದಸ್ಯರಿಗೆ ಒಂದು ರೀತಿ, ಒಬ್ಬ ಸದಸ್ಯರಿಗೆ ಒಂದು ರೀತಿ ಏಕೆ ತಾರತಮ್ಯ ಮಾಡುತ್ತೀರಿ. ಈ ರೀತಿ ಮಾಡುವುದು ಖಂಡಿತ ಸರಿಯಲ್ಲ,

ಅಧ್ಯಕ್ಷರು.—ತಾಪು ತಪ್ಪು ತಿಳಿದುಕೊಂಡಿದ್ದೀರಿ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಆರ್ಮುಗಂರವರು ಮಾತನಾಡುತ್ತಿದ್ದಾಗ ನಾನು ಒಂದು ಚಕಾರ ಶಬ್ದ ಎತ್ತದೆ ಕುಳಿತಿದ್ದೆ. ಅವರು ಸಭೆಯ ಕಾರ್ಯಕಲಾಪಗಳ ಬಗ್ಗೆ ಹಾಗೂ ಸದಸ್ಯರ ಹಕ್ಕುಗಳ ಬಗ್ಗೆ ತಾವು ತಮ್ಮ ಆದೇಶ ಕೊಡಬೇಕೆಂದು ತಮಗೆ ಸೂಚನೆ ಕೊಟ್ಟಿದ್ದಾರೆ, ನಿರ್ದೇಶನ ಕೊಡಲಿಕ್ಕೆ ಅಧಿಕಾರ ಇಲ್ಲ. ಸೂಚನೆ ಕೊಟ್ಟಿರುವುದು ಸಂತೋಷ ಸದಸ್ಯರುಗಳ ಹಕ್ಕನ್ನು ಪ್ರತಿಪಾದನೆ ಮಾಡಿ ದ್ದಾರೆ, ನಮ್ಮ ಮತ್ತು ಅವರ ಹಕ್ಕುಗಳೆಲ್ಲ ಒಂದೇ. ಅವರು ಮಾತನಾಡುವಾಗ ನಾನು ನನ್ನ ತಾಳ್ಮೆ ಯನ್ನು ಕಳೆದುಕೊಳ್ಳಲಿಲ್ಲ. ಪ್ರತಿಯೊಬ್ಬರಿಗೂ ಮಾತನಾಡುವ ಹಕ್ಕು ಇದೆ. ನನಗೆ ಎಷ್ಟಿದೆಯೋ ಅವರಿಗೂ ಕೂಡ ಅಷ್ಟೇ ಇದೆ. ಅವರು ಏನು ಮಾತುಗಳನ್ನು ಹೇಳಿದ್ದಾರೆ ಅದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

> "I have come here to protect my personal self respect and the respect of the people who elected me to this House. The Chief Minister must address me as Hon. Member. Let it be anybody; let it be even God. Nobody is above me..... etc.," ಎಂದು ಹೇಳಿದ್ದಾರೆ.

ಇವತ್ತು ಇಂತಹ ಒಂದು ವಿಶೇಷವಾದಂತಹ ಹೇಳಿಕೆಯನ್ನು ಕೊಡುವ ಸಲುವಾಗಿ ನಮ್ಮ ನಾಯಕರು ಏನು ತಮ್ಮ ಅನುಮತಿ ಕೇಳಿದ್ದಾರೆ ಅದು ಸರ್ಕಾರದ ಸಮ್ಮತಿ ಮುಖೇನ ಆಗಬೇಕೆಂದಿರಿ. ಅಂತಹ ಒಂದು ಹೇಳಿಕೆಯನ್ನು ಕೊಡುವುದಕ್ಕೆ ಜನರು ನಮ್ಮನ್ನು ಇಲ್ಲಿಗೆ ಚುನಾಯಿಸಿ ಕಳುಹಿಸಿದ್ದಾರೆ.

ಶ್ರೀ ಕೆ. ವೆಂಕಟರಾಮಯ್ಯ.—ಜನರು ನಮ್ಮನ್ನು ಚುನಾಯಿಸಿ ಕಳುಹಿಸಿದ್ದಾರೆ. ನಾವೇನೂ ಹಾಗೆ ಬಂದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ವೆಂಕಟರಾಮ್‌ರವರೇ, ಕೂಗಿ ನಮ್ಮನ್ನು ಕೂರಿಸು ತ್ತೇವೆಂದರೆ ಅದು ಸಾಧ್ಯವಾಗುವುದಿಲ್ಲ. ಇವತ್ತು ನಾನು ಮಾತನಾಡುವಾಗ ಈ ರೀತಿ ಕೂಗಿ ನಿಲ್ಲಿಸು ತ್ತೇವೆಂದರೆ ಅದು ಖಂಡಿತವಾಗಿಯೂ ಸಾಧ್ಯವಾಗುವುದಿಲ್ಲ.

ಶ್ರೀ ಕೆ. ವೆಂಕಟರಾಮಯ್ಯ.—ಈ ರೀತಿಯಾಗಿ ಸದಸ್ಯರನ್ನು ಕುರಿತು ಮಾತನಾಡಬಾರದು.

ಶ್ರೀ ಹೆಚ್. ಡಿ. ದೇವೇಗೌಡ.—ಅವರು ಮಾತನಾಡುವಾಗ ತಮ್ಮ ಮುಖಾಂತರ ಹೇಳಿದರು ಎಂದು ಭಾವಿಸುತ್ತೇವೆ. ನಾವು ಮಾತನಾಡುವಾಗಲೂ ಕೂಡ ಅವರು ಅದೇ ರೀತಿ ಭಾವಿಸಬೇಕು. ಕಾನೂನನ್ನು ಕೇಳಿದರೆ ನಿಯಮಾವಳಿಯನ್ನು ಹೇಳಿದಿರಿ. ಕಾನೂನು ಬಾಹಿರವಾಗಿ ನಡೆದಿರತಕ್ಕ ವಿಷಯ ವನ್ನು ನಿಯಮಾವಳಿಗೆ ತದ್ವಿರುದ್ಧವಾಗಿ ನಡೆದಿರತಕ್ಕ ವಿಷಯವನ್ನು ಜನತೆಯ ಪ್ರತಿನಿಧಿಗಳಾದ, ಜನತಾ ಪ್ರತಿನಿಧಿಗಳಾದ, ಜನತೆಯನ್ನು ಪ್ರತಿನಿಧಿಸತಕ್ಕ ಸಭೆ ಇದೆಯಲ್ಲ ಈ ಸಭೆಯಲ್ಲಿ ನಿಯಮಾ ವಳಿಗಳಲ್ಲಿ ಇಲ್ಲದ್ದನ್ನು ಕಾನೂನಿನ ಚೌಕಟ್ಟಿನಲ್ಲಿ ಇಲ್ಲದ್ದನ್ನು ಇದುವರೆಗೆ ನಾವು ಎಂದೂ ಕೇಳಿಲ್ಲ. ಆದರೆ ಈ ಒಂದು ಪರಿಸ್ಥಿತಿಯಲ್ಲಿ ಮಾತ್ರ ನಾವು ಇಂದು ಕೇಳುತ್ತಿದ್ದೇವೆ.

I said there is no rule; there is no provision. Under no provision we want to make this statement, For this we want to take the co-operation of the Government. If they don't want to give the co-operation then let them stick to their stand, we will also stick to our stand.

SRI D. DEVARAJ URS.—I have heard with rapt attention to what Mr. Deve Gowda, the President of Janata Party just now spoke. I continue to believe that he is the man who respect the rules and regulations. Now all his force appears to be that we should act outside the rules and regulations of this House. In the interest of the public, he wants to say that it has to be done without having any regard and respect for the rules of procedure, If that is his contention....

SRI H. GANGADHARAN.—It is not like that...

MR. SPEAKER.—Please don't interupt. It is not fair on your part to do like that.

SRI D. DEVARAJ URS.—If Mr. Gangadharan wants to interpret what Mr. Deve Gowda said, it is for him to do so. Unless otherwis it is contradicated by himself, I take that he wants to act beyond the rules and regulations and he is making a request to the Government that the Government should allow such a procedure in this house. He has quoted the instance of Stephen who was allowed to make such a statement in the Lok Sabha. He was conveniently omitted to mention under what context and time he was allowed to make such

a statement. But he was careful in mentioning that it was allowed with Speaker's permission. I am sure, Mr. Stephen was not given permission suspending the Question Hour.

When the debate was going on, at some time in the day, perhaps the question of Bihar and Samasthipur election came up and then he was asked to make a statement. That is what I remember. Even now, I have never, at any stage, stated that the Leader of the Opposition should not be allowed to make a statement. Now the question is whether the issue-however important the issue may be-cannot wait for one hour, till the question hour is over. I am still under the impression that the ruling of the speaker is already there. Whether there is a ruling or not it is for the Chair to clarify Mr. Armugam may feel differently about it. Let it not be understood that Government is hesitating and trying to run away or that the Government is not willing to hear what the hon. Leader of the Opposition has to state. On the other hand, I most welcome any debate on issues they bring before this House. But even without telling us, what that issue is, they say that it is something extraordinary. What is that something? We don't know. Nor have they given any statement, or any motion or any subject before you because you just now mentioned there is no such matter before you. Assuming that it is of great importance, I want to know from the hon. Member Sri Deve Gowda whether that most important issue which he wants to raise cannot wait for one hour-till the question hour is over. Five hours have elapsed. Again and again, I repeatedly say let me not be misunderstood in this House I am not interested in stalling any debate on any issue which comes before the House in accordance with the Rules of Procedure. If the hon. Janatha Party President were to say 'No, No, because I feel it is important, you have to agree', I am sorry, Sir, I cannot be allowed to be forced that way to a situation where Government should accept whatever they want to do and I will become a party to the conduct of the affairs of this House beyond the Rules of Procedure.

† ಶ್ರೀ ಹೆಚ್.ಡಿ. ದೇವೇಗೌಡ.— ಸ್ವಾಮಿ, ನಾನು ಮೊತನಾಡಿದ್ದು ತಮ್ಮ ಅನುಮತಿ ಯಿಂದ. ನಾನು ಯಾವ ಪೋರ್ಷನ್ ತಗಂಡ ಅಪಾಯಿಂಡ್ ಮಾಡಿಲ್ಲಾ. ಈ ಸಭೆಯ ನಿಯಮಾವಳಿ ಪ್ರಕಾರ ಸದಸ್ಯರಿಗೆ ಸ್ಟೇಟ್‌ಮೆಂಟ್ ಮಾಡುವ ಹಕ್ಕಿಲ್ಲ ಅನ್ನುವ ಮಾತನ್ನು ಹೇಳಿದ್ದಾರೆ. ತಮ್ಮ ಜ್ಞಾಪಕಕ್ಕೆ ತರುತ್ತೇನೆ, ಹಿಂದೆ ಪ್ರಶ್ನೋತ್ತರ ವೇಳೆಯನ್ನು ಸಸ್ಪೆಂಡ್ ಮಾಡಿದ್ದು ಎರಡೂ ಕಡೆಯ ಈ ಸಭೆಯ ಸದಸ್ಯರ ಸಹಕಾರದಿಂದ ಅನ್ನುವುದನ್ನು ಹೇಳಿದರೆ ತಾವೂ ಕೂಡ ಒಪ್ಪಿಕೊಳ್ಳುತ್ತೀರಿ, ವಿರೋಧ ಪಕ್ಷದವರ ಅನುಕೂಲಕ್ಕಾಗಿ ಕೊರ್ಟನ್ ಅವರ್‌ಅನ್ನು ಎಂದೂ ಸಸ್ಪೆಂಡ್ ಮಾಡಿಲ್ಲಾ. ಸರ್ಕಾರಕ್ಕೆ ಸಹಕಾರ ಕೊಡಬೇಕು ಅನ್ನುವ ದೃಷ್ಟಿಯಿಂದ ರೂಲ್ ಸಸ್ಪೆಂಡ್ ಮಾಡಿದ್ದನ್ನು ಒಪ್ಪಿಕೊಂಡು ಮಾಡಿದ್ದೇವೆ. ತಮ್ಮ ಮುಂದೆ ಹೇಳಬೇಕಾದರೆ ತಾವು ಈ ಸಭೆಯ ನಾಯಕರೂ ಆಗಿದ್ದೀರಿ ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಆಗಿದ್ದೀರಿ ಮತ್ತು ಹಣಕಾಸಿನ ಮಂತ್ರಿಗಳು ಆಗಿದ್ದೀರಿ ಮತ್ತು ಕಾಂಗ್ರೆಸ್ (ಐ) ಪಕ್ಷದ ಅಧ್ಯಕ್ಷರೂ ಆಗಿದ್ದೀರಿ, ಆದುದರಿಂದ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವು

ದೇನೆಂದರೆ ನಾವು ಈಗ ನಿಮ್ಮ ಮುಂದೆ ಏನು ಒಂದು ಮನವಿ ಮಾಡಿದ್ದೇವೆ ಅದಕ್ಕೆ ಸಹಕಾರ ಕೊಡಿ ಸ್ವಾಮಿ ಎಂದು. ಹಾಗೇನಾದರೂ ತಾವು ಅವಕಾಶ ಕೊಡದೇ ಹೋದರೆ ಈ ಸಭೆಯಲ್ಲಿ ಕಾನೂನು ಪ್ರಕಾರ ಏನು ಕಾರ್ಯಕ್ರಮ ತೆಗೆದುಕೊಳ್ಳಬಹುದೋ ಅದನ್ನು ತೆಗೆದುಕೊಳ್ಳಬಹುದು ಎಂದು ಹೇಳುತ್ತೇನೆ. ಸ್ವಾಮಿ.

ಶ್ರೀ ಡಿ. ದೇವರಾಜ ಅರಸ್.— ಅಂಥಾ ಗಂಡಾಂತರ ಏನು ಇದೆ ಅನ್ನುವುದನ್ನು ತೋರಿಸಲಿ ಎನ್ನುವುದೇ ನನ್ನ ಅರಿಕೆ.

ಶ್ರೀ ಹೆಚ್ ಡಿ. ದೇವೇಗೌಡ.— ಏನು ಗಂಡಾಂತರ ಇದೆ ಅನ್ನುವುದನ್ನು ಹೇಳುತ್ತೇನೆ. ಅದಕ್ಕೇನೇ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ನಾವು ಕೇಳುತ್ತೇವೆ.

ಶ್ರೀ ಎಸ್.ಆರ್. ಬೊಮ್ಮಾಯಿ.— ತಾವು ಕಾಂಗ್ರೇಸ್ (ಐ) ಪಕ್ಷದ ಅಧ್ಯಕ್ಷರೂ ಹೌದು, ಶ್ರೀಮಾನ್ ದೇವೇಗೌಡರು ಜನತಾ ಪಕ್ಷದ ಅಧ್ಯಕ್ಷರೂ ಹೌದು. ಆದರೆ ಮಾತನಾಡತಕ್ಕಂಥಾ ಥಾಟೆ ಸರಿಯಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುತ್ತೇನೆ ಪ್ರಶ್ನೋತ್ತರ ಕಾಲವನ್ನು ಒಂದು ದಿವಸ ಒಂದು ಗಂಟೆ ಕಾಲ ತಡೆ ಹಿಡಿದಿದ್ದರೆ ಏನಾಗುತ್ತಿತ್ತು, ಎಂದು. ಒಂದು ದಿವಸ ಪ್ರಶ್ನೋತ್ತರ ಕಾಲವನ್ನು ಒಂದು ಗಂಟೆಕಾಲ ತಡೆ ಹಿಡಿದಿದ್ದರೆ ಆಕಾಶವೇನೂ ಕಳಚಿ ಬೀಳುತ್ತಿತ್ತೇ ಎಂದು ಕೇಳುತ್ತೇನೆ. ನಾನು ಹೇಳುತ್ತೇನೆ ಸ್ವಾಮಿ, ಇದು ಕರ್ನಾಟಕ ರಾಜ್ಯದ ನಾಗರೀಕರ ಹಕ್ಕುಗಳ ಪ್ರಶ್ನೆ ಅವರ ಪ್ರಾಣ ಗಳ ಪ್ರಶ್ನೆ ಮತ್ತು ಅವರ ಮಾನಭಂಗದ ಪ್ರಶ್ನೆ ಆಗಿರುವುದರಿಂದ ನಾನು ಈ ಮುಖ್ಯವಾದ ವಿಷಯ ವನ್ನು ಎತ್ತಬೇಕಾಗಿದೆ. ಇಂಥಾ ಮುಖ್ಯವಾದ ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪ ಮಾಡೋಣ ಎಂದರೆ ಇದು ಅಂಥಾ ಮಹತ್ವ ಇಲ್ಲ ಅನ್ನುವುದಾದರೆ ಸರ್ಕಾರ ಯಾವುದಾದರೂ ಒಂದು ಆರ್ಡಿನೆನ್ಸ್ ಅನ್ನು ತೀವ್ರತರವಾಗಿ ಪಾಸ್ ಮಾಡಬೇಕಾದ ಪ್ರಶ್ನೆ ಬಂದಾಗ ಪ್ರಶ್ನೋತ್ತರಗಳ ಕಾಲವನ್ನು ತಾವು ಮುಂದಕ್ಕೆ ಹಾಕಿರುವುದು ಈ ರಾಜ್ಯದ ಜನತೆಗೆ ಗೊತ್ತಿದೆ. ಸುಮ್ಮನೆ ಇದು ನಮಗೆ ಗೊತ್ತಿಲ್ಲ ಅನ್ನೋವ ನೆಪದಲ್ಲಿ ಹೇಳಬಾರದು. ಈ ವಿಚಾರ ಗಹನವಾದಂಥಾ ವಿಚಾರ ; ಆದುದರಿಂದ ವಿರೋಧ ಪಕ್ಷದ ನಾಯಕರು ಒಂದು ದಿವಸದ ಮಟ್ಟಿಗೆ ಒಂದು ಗಂಟೆ ಕಾಲ ಪ್ರಶ್ನೋತ್ತರ ಕಾಲವನ್ನು ಮುಂದಕ್ಕೆ ಹಾಕಿ ಎಂದು ಕೇಳಿರುವ ಉದ್ದೇಶ ಪುನಃ ಮತ್ತೊಮ್ಮೆ ನಾವು ತಮ್ಮನ್ನು ಕೇಳಿಕೊಳ್ಳುತ್ತೇವೆ ; ಒಂದು ದಿವಸದ ಮಟ್ಟಿಗೆ ಪ್ರಶ್ನೋತರ ಕಾಲವನ್ನು ಒಂದು ಗಂಟೆ ಕಾಲ ಮುಂದಕ್ಕೆ ಹಾಕಿ ಈ ವಿಷಯವನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು. ಇದರಿಂದೇನೂ ನಿಮ್ಮ ಸಭೆಯ ಘನತೆಗೌರವ ಗಳೇನೂ ಕಡಿಮೆಯಾಗುವುದಿಲ್ಲ ; ಎಂದು ನಾನು ಹೇಳುತ್ತೇನೆ. ಆಲ್ಲದೆ ಮಾನ್ಯ ಮುಖ್ಯಮಂತ್ರಿ ಗಳು ಈ ಬಗ್ಗೆ ಉತ್ತರ ಕೊಡುವ ಥಾಟೆ ನೋಡಿದರೆ ಬಹಳ ಬೇಜಾರಾದಂತೆ ಕಾಣುತ್ತದೆ. ಅವರು ಹೇಳತಕ್ಕಂಥಾ ಥಾಟೆ ಏನು ಇದೆ ಅದು ಸರಿಯಲ್ಲ. ಆದುದರಿಂದ ನಾನು ಹೇಳಿಕೆ ಕೊಡುವುದಕ್ಕೆ ತಾವು ಅವಕಾಶ ಕೊಡಬೇಕು ಎಂದು ಕೇಳುತ್ತೇನೆ. ಮಾನ್ಯ ಆರ್ಮುಗಂರವರು ಈ ಸಭೆಯ ವಿಚಾರವಾಗಿ ಏನು ಹೇಳಿದರು ಆ ಬಗ್ಗೆ ನಾನು ಮತ್ತೊಮ್ಮೆ ಈ ಸಭೆಯಲ್ಲಿ ಒತ್ತಾಯ ಮಾಡುತ್ತೇನೆ, ಅದೇನೆಂದರೆ ಈ ಸಭೆಯ ಪ್ರಶ್ನೋತ್ತರ ಕಾಲವನ್ನು ಒಂದು ದಿವಸದ ಮಟ್ಟಿಗೆ ಒಂದು ಗಂಟೆಕಾಲ ಮುಂದೂಡಿ ನಾವು ಹೇಳಿಕೆ ಕೊಡುವುದಕ್ಕೆ ಅವಕಾಶ ಮಾಡಿಕೂಡಬೇಕು ಎಂದು ಕೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ಸ್ವಾಮಿ, ಒಂದು ದಿವಸ ಅಲ್ಲ ಎರಡು ದಿವಸ ತೆಗೆದುಕೊಳ್ಳಿ, ಹೇಡ ಅನ್ನುವುದಿಲ್ಲ. ಇದಕ್ಕೆ ಒಂದು ಕಾಲ ನಿಗದಿ ಮಾಡಿಕೊಳ್ಳಿ. ಇದಕ್ಕೆ ಯಾವರೀತಿ ಮೋಷನ್ ತರ ಬೇಕೋ ಆ ವಿಚಾರ ನಿಮಗೆ ಬಿಟ್ಟಿದ್ದು, ನೀವೇ ತೀರ್ಮಾನ ಮಾಡಿಕೊಳ್ಳಿ.

ಶ್ರೀ ಎಸ್.ಆರ್. ಬೊಮ್ಮಾಯಿ.— ನಾನು ಪುನಃ ಒತ್ತಿ ಒತ್ತಿ ಹೇಳುವುದಿಲ್ಲ. ಈ ದಿನದ ಸಭೆ ಮುಗಿಯುವುದಕ್ಕೆ ಇನ್ನು ೧೦ ನಿಮಿಷಗಳ ಕಾಲಮಾತ್ರ ಇದೆ. ನಾನು ಈ ಬಗ್ಗೆ ಹೇಳಿಕೆ ಕೊಡುವು ದಕ್ಕೆ ಎರಡೂ ಕಡೆಯ ಸದಸ್ಯರನ್ನೂ ಕೂಡ ಕೇಳಿಕೊಳ್ಳುತ್ತೇವೆ, ಇದಕ್ಕೆ ಅವಕಾಶ ಕೊಡಿ ಎಂದು. ಇದಕ್ಕೆ ಆ ಕಡೆಯ ಸದಸ್ಯರು ಒಪ್ಪಿಕೊಳ್ಳುತ್ತಾರೆಂದು ತಿಳಿದುಕೊಳ್ಳುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.— ಈ ಬಗ್ಗೆ ತಾವು ಆಗಲೇ ರೂಲಿಂಗ್ ಕೊಟ್ಟಿದ್ದೀರಲ್ಲಾ ಸ್ವಾಮಿ,

ಅಧ್ಯಕ್ಷರು.— ಸುಮಾರು ನಾಲಕ್ಕೂ ಕಾಲು ಗಂಟೆಯಿಂದ ಈ ಸಭೆಯಲ್ಲಿ ಈ ವಿಚಾರವಾಗಿ ಪ್ರಸ್ತಾಪ ಮಾಡಿದ ವಿಷಯಗಳನ್ನು ನಾನು ಕೇಳಿದ್ದೇನೆ. ಈ ವಿಚಾರವಾಗಿ ಈ ಸಭೆಯಲ್ಲಿ ಪ್ರಸ್ತಾಪ

ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಕೇಳಿದ್ದಾರೆ. ವಿರೋಧ ಪಕ್ಷದ ನಾಯಕರು ನಾನು ಈ ಬಗ್ಗೆ ಈ ಸಭೆಯಲ್ಲಿ ಒಂದು ಸ್ಟೇಟ್‌ಮೆಂಟ್ ಮಾಡಬೇಕು ಅದಕ್ಕೆ ಅಪ್ಪಣೆ ಕೊಡಬೇಕು ಎಂದು ಕೇಳಿದ್ದಾರೆ ಮತ್ತು ಈ ಬಗ್ಗೆ ಇರತಕ್ಕಂಥಾ ನಿಯಮಾವಳಿಗಳನ್ನು ರದ್ದು ಮಾಡಿ ಈ ಸಭೆಯಲ್ಲಿ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಅವಕಾಶ ಕೊಡಬೇಕು ಎನ್ನುವ ವಾದವನ್ನು ಮಾಡಿದ್ದಾರೆ.

ಮಾನ್ಯ ಮುಖ್ಯಮಂತ್ರಿಗಳು ಕಾನೂನಿನ ಪರಿಮಿತಿ ಏನು ಇದೆ, ನಿಯಮಾವಳಿಗಳಲ್ಲಿ ಏನು ಇದೆ ಎನ್ನುತಕ್ಕದ್ದನ್ನು ಹೇಳಿದ್ದಾರೆ. ನಂತರ ಇನ್ನೂ ಅನೇಕ ಸದಸ್ಯರು ಇದರ ಬಗ್ಗೆ ಹೇಳಿದ್ದನ್ನು ನಾನು ಕೇಳಿದೆನಲ್ಲಿ. ನಾನು ಆಪರ ಹೇಳಿಕೆಗೆ ಪ್ರಾರಂಭವಾಗುವಂಥ ನಿಯಮವನ್ನು ತೋರಿಸಿ ಎಂದು ಕೇಳಿದ್ದಕ್ಕೆ ಯಾರೂ ನಿಯಮವನ್ನು ತೋರಿಸಲಿಲ್ಲ. ಇದರ ಜೊತೆಗೆ ಮಾನ್ಯ ಆರ್ಥಿಕ ಮಂತ್ರಿಗಳು ಬಜೆಟ್ ಮೇಲೆಯ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ಪ್ರಶ್ನೆ ಹಾಕುವುದು ಎಲ್ಲಾ ಸದಸ್ಯರಿಗೆ ಇರತಕ್ಕ ಹಕ್ಕು. ಅದನ್ನು ಹೊಟಕು ಮಾಡಲಾಗುವುದಿಲ್ಲ. ಹಾಗೆಯೇ ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೆ ನಿಯಮಾವಳಿಗಳ ವ್ಯಾಪ್ತಿಯಲ್ಲಿ ಇದಕ್ಕೆ ಸಂಬಂಧಪಟ್ಟ ನೋಟೀಸನ್ನು ಕಳುಹಿಸಲು ಸಲಹೆ ಮಾಡಿದ್ದೆನಿ. ಆದರೆ ನಿಯಮಗಳನ್ನು ಬಿಟ್ಟು ಸ್ಟೇಟ್‌ಮೆಂಟ್ ಮಾಡಲು ಅವಕಾಶ ಕೊಡಬೇಕೆಂದು ಕೇಳುತ್ತಿದ್ದಾರೆ. ಅದಕ್ಕೆ ಒಪ್ಪಿಗೆ ಕೊಡುವುದಕ್ಕಾಗುವುದಿಲ್ಲ. ಅದಕ್ಕಿಂತ ನಾನು ಆಗಲೇ ನಿಯಮಾವಳಿಗಳ ಪ್ರಕಾರ ನೋಟೀಸ್ ಕಳುಹಿಸಲು ಸಲಹೆ ಮಾಡಿದ್ದೆನಿ. ಈಗ ಅಜೆಂಡಾದ ಪ್ರಕಾರ ಪ್ರಶ್ನೋತ್ತರ ನೋಟೀಸನ್ನು ತೆಗೆದು ಕೊಂಡು ಸಭೆಯನ್ನು ನಡೆಸೋಣವೇ ಅಥವಾ ಸಭೆಯನ್ನು ಇಷ್ಟಕ್ಕೆ ಮುಕ್ತಾಯ ಮಾಡೋಣವೇ ಎನ್ನುವ ವಿಷಯವನ್ನು ಸಭೆಯು ನಿರ್ಧರಿಸಬೇಕಾಗಿದೆ. ಇದು ನಮ್ಮ ಪಾರ್ಲಿಮೆಂಟರಿ ಪ್ರಶ್ನೆ.

ಸಭೆಯು ಈಗ ಎದ್ದು ನಾಳೆ ಬೆಳಿಗ್ಗೆ ೯ ಗಂಟೆಗೆ ಸೇರುತ್ತದೆ.

*The House adjourned at Fifty Five Minutes past Five of the Clock to meet again at Nine of the Clock on Saturday the 20th January 1979*